ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

23 ಫೆಬ್ರವರಿ 2026 ಸೋಮವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 339 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629



ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಐಸಿಸಿ ಟಿ-20 ವಿಶ್ವಕಪ್ ಟೂರ್ನಿಯ ಸೂಪರ್-08 ಹಂತದ ಪಂದ್ಯದಲ್ಲಿ ಭಾರತಕ್ಕೆ 188 ರನ್‌ಗಳ ಟಾರ್ಗೆಟ್ ನೀಡಿದ ದಕ್ಷಿಣ ಆಫ್ರಿಕಾ



ಬೇಡ ಪರೀಕ್ಷೆಯ ಭಯ : ಇರಲಿ ಸಂಭ್ರಮ » 2



ರಾಜ್ಯದ 13 ಪ್ರಮುಖ ಅಣೆಕಟ್ಟುಗಳ ಪೈಕಿ ಹತ್ತು ಜಲಾಶಯಗಳಲ್ಲಿ ಈಗ ಹಿಂದಿನ ವರ್ಷಕ್ಕಿಂತ ಕಡಿಮೆ ನೀರು ಸಂಗ್ರಹವಾಗಿದೆ. ಹೆಚ್ಚುತ್ತಿರುವ ತಾಪಮಾನದಿಂದಾಗಿ ಅಣೆಕಟ್ಟುಗಳಿಂದ ನೀರು ಆವಿಯಾಗುವಿಕೆ ಇದಕ್ಕೆ ಪ್ರಮುಖ ಕಾರಣವಾಗಿದೆ, ಅತಿಯಾದ ಬಳಕೆ ಅಂತರ್ಜಲದ ಮೇಲೂ ಪರಿಣಾಮ ಬೀರಿದೆ.



ಕೊಳಕು ರಾಜಕೀಯಕ್ಕೆ ಅಖಾಡವಾಗಿ ಬಳಕೆ » 4

# ಕುಮಾರಸ್ವಾಮಿ-ಸಿದ್ದರಾಮಯ್ಯ ವಾಕ್ಸಮರ ಜೋರು

## ಸಿಎಂ ಆಗಿದ್ದು ದೇವೇಗೌಡರ ದೇಣಿಗೆ ಎಂದ ಹೆಚ್.ಡಿ.ಕೆ. | ಚರ್ಚೆಗೆ ಗ್ರಾಸವಾದ ಜಾತಿ ಅಸ್ತ್ರ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆ, ಅಧಿಕಾರ ಹಸ್ತಾಂತರದ ಚರ್ಚೆಗಳು ಜೋರಾಗಿರುವ ಮಧ್ಯೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಮಾತಿನ ವಾಗ್ಬಾಣ ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಕುರಿ ಕಾಯುತ್ತಿದ್ದವನು ಮುಖ್ಯಮಂತ್ರಿ ಆದದ್ದೇ ಪಟ್ಟಭದ್ರರ ಕಣ್ಣು ಕೆಂಪಾಗಲು ಕಾರಣವೆಂಬ ಸಿದ್ದರಾಮಯ್ಯ ಅವರ ಹೇಳಿಕೆಗೆ, ರಾಜಕೀಯವಾಗಿ ಅತಂತ್ರವಾದಾಗ ಆಶ್ರಯ ನೀಡಿದ್ದ ಕಾಂಗ್ರೆಸ್ ಹಿರಿಯರನ್ನೇ ಮೂಲೆಗುಂಪು ಮಾಡಿ ಪಕ್ಷದ ಮೇಲೆ ಹಿಡಿತ ಸಾಧಿಸಿದ್ದ ಸಿದ್ದರಾಮಯ್ಯ, ಈಗ ಮುಖ್ಯಮಂತ್ರಿ ಕುರ್ಚಿ ಬಿಡುವುದಿಲ್ಲ ಎನ್ನುವುದನ್ನು ಹೇಳಲು ಜಾತಿ ಅಸ್ತ್ರ ಬಳಸಿರಬಹುದೆಂದು ಕುಮಾರಸ್ವಾಮಿ ಅವರು ಪ್ರತಿಕ್ರಿಯಿಸಿದ್ದರು.

ಈ ಹೇಳಿಕೆಗೆ ತೀಕ್ಷ್ಣವಾಗಿ ತಿರುಗೇಟು ನೀಡಿರುವ ಸಿದ್ದರಾಮಯ್ಯ ಅವರು, ಕುಮಾರಸ್ವಾಮಿ ಮತ್ತು ಅವರ ತಂದೆ ಹೆಚ್.ಡಿ.ದೇವೇಗೌಡರು ಖಂಡಿತಾ ಜಾತಿವಾದಿಗಳಲ್ಲ. ಅವರು ಸ್ವಜಾತಿ ವಿರೋಧಿಗಳು. ಅದಕ್ಕಿಂತಲೂ ಮುಖ್ಯವಾಗಿ ಕುಟುಂಬವಾದಿಗಳು. ಅವರಿಗೆ ತಮ್ಮ ಜಾತಿ ಒಂದು ಓಟ್ ಬ್ಯಾಂಕ್ ಅಷ್ಟೆ ಎಂದು ಕುಟುಕಿದ್ದಾರೆ. ತಂದೆ ಮತ್ತು ಮಕ್ಕಳು ತಮ್ಮ ಕುಟುಂಬದ ಸ್ವಾರ್ಥಕ್ಕಾಗಿ ರಾಜಕೀಯ ಕ್ಷೇತ್ರದಲ್ಲಿ ಉಳಿದವರನ್ನು ಬಿಟ್ಟುಬಿಡಿ, ಸ್ವಜಾತಿ ನಾಯಕರು ಕೂಡಾ ಬೆಳೆಯದಂತೆ ಒಬ್ಬೊಬ್ಬರನ್ನೇ ಮುಗಿಸುತ್ತಾ ಬಂದವರು. ಹಿಂದೆ, ಇಂದು ಮತ್ತು ಮುಂದೆ ಜಾತ್ಯತೀತ ಜನತಾದಳದ ತುತ್ತತುದಿಯ ನಾಯಕರು ಗೌಡರ ಕುಟುಂಬದವರೇ ಆಗಿರುತ್ತಾರೆ ಎನ್ನುವುದು ಸತ್ಯವೆಂದು ಕಾಲೆಳೆದಿದ್ದಾರೆ.

ತಮ್ಮ ಸುದೀರ್ಘ ರಾಜಕೀಯ ಜೀವನದಲ್ಲಿ ಹೆಚ್.ಡಿ.ದೇವೇಗೌಡರು ಎಷ್ಟು ಒಕ್ಕಲಿಗ ನಾಯಕರನ್ನು ಜೆಡಿ(ಎಸ್) ಪಕ್ಷದಲ್ಲಿ ಬೆಳೆಸಿದ್ದಾರೆಂದು

» ನಾಲ್ಕನೇ ಪುಟದಲ್ಲಿ



" ಜಾತಿಯಿಂದ ಮಾತ್ರವಲ್ಲ, ಅರ್ಹತೆಯ ಬಲದಿಂದಲೇ ಮುಖ್ಯಮಂತ್ರಿಯಾಗುವಂತಹ ದಲಿತ ಸಮುದಾಯದ ನಾಯಕರು ಕೂಡಾ ಕಾಂಗ್ರೆಸ್ ಪಕ್ಷದಲ್ಲಿಯೇ ಇರುವುದು. ಮುಂದೊಂದ ದಿನ ದಲಿತ ಸಮುದಾಯದಿಂದ ಯಾರಾದಾರೂ ಮುಖ್ಯಮಂತ್ರಿಯಾದರೆ ಅದು ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಧ್ಯ ಎನ್ನುವುದನ್ನು ವಿಶ್ವಾಸಪೂರ್ವಕವಾಗಿ ಹೇಳಬಲ್ಲೆ.

-ಸಿದ್ದರಾಮಯ್ಯ, ಮುಖ್ಯಮಂತ್ರಿ



" ನಿಮಗಿಂತ ಮೊದಲೇ ಮಲ್ಲಿಕಾರ್ಜುನ ಖರ್ಗೆ ಅವರು ಮುಖ್ಯಮಂತ್ರಿ ಆಗಬೇಕಿತ್ತು. ಇದ್ದ ಪ್ರತಿಪಕ್ಷ ಸ್ಥಾನವನ್ನೂ ಕಿತ್ತುಕೊಂಡು ಅವರನ್ನು ಅತ್ಯಂತ ಅಪಮಾನಕರವಾಗಿ ದಿಲ್ಲಿಗೆ ಓಡಿಸಿದಿರಿ. ಇನ್ನೊಬ್ಬ ದಲಿತ ನಾಯಕ ಡಾ.ಜಿ.ಪರಮೇಶ್ವರ್ ಅವರನ್ನು ನಿಮ್ಮ ದಾರಿಗೆ ಅಡ್ಡ ಬರುತ್ತಾರೆಂದು ಚುನಾವಣೆ ಕಣದಲ್ಲೇ ಮುಗಿಸಿದಿರಿ, ನಿಮ್ಮನ್ನು ಕಾಂಗ್ರೆಸ್ಸಿಗೆ ಕರೆತಂದ ಹೆಚ್.ವಿಶ್ವನಾಥ್ ಅವರನ್ನು ಎಲ್ಲಿ ಇಟ್ಟಿದ್ದೀರಿ ನೆನಪು ಮಾಡಿಕೊಳ್ಳಿ.

-ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

### ಅರಸು ಬೆನ್ನಿಗಿರಿದ ದೂರ್ತರು ಯಾರು ?

ಸಿದ್ದರಾಮಯ್ಯನವರೇ, ನಿಮ್ಮ ಸ್ವಾರ್ಥಕ್ಕೆ ಜಾತಿ ಎಳೆದು ತಂದಂತೆ ಹಿರಿಯ ರಾದ ಕೆಂಗಲ್ ಹನುಮಂತಯ್ಯ, ಕಡಿದಾಳ್ ಮಂಜಪ್ಪ, ಎಸ್.ಎಂ. ಕೃಷ್ಣ ಅವರನ್ನು ಏಕೆ ಎಳೆದು ತರುತ್ತೀರಿ. ಎಸ್.ಎಂ.ಕೃಷ್ಣ ಅವರ ಹೆಸರೇಳುವ ಸಾಸಿವೆ ಕಾಳಷ್ಟು ಯೋಗ್ಯತೆ, ನೈತಿಕತೆ ನಿಮಗಿದೆಯೇ. ಒಕ್ಕಲಿಗರನ್ನು ಬೆಳೆಸಿದ್ದು ಕಾಂಗ್ರೆಸ್ಸು ಅಂತೀರಿ.. ಬರೀ ಬುರಡೆ.. ವಿಧಾನಸೌಧ ಕಟ್ಟಿದ ಕೆಂಗಲ್ ಅವರಿಗೆ ನಿಮ್ಮ ನೆಹರು ಕೊಟ್ಟ ಕಿರುಕುಳ, ಮಾಡಿದ ಅಪಮಾನ ಅಷ್ಟಿಷ್ಟಾ. ಸಾಮಾಜಿಕ ನ್ಯಾಯದ ಹರಿಕಾರ ದೇವರಾಜ ಅರಸು ಅವರಿಗೆ ಬೆನ್ನಿಗಿರಿದ ದೂರ್ತರು ಯಾರು, ಯಾವ ಪಕ್ಷದವರು. ಒಕ್ಕಲಿಗರನ್ನು ಮುಖ್ಯಮಂತ್ರಿ ಮಾಡುವುದು ಕಾಂಗ್ರೆಸ್ಸೇ ಎನ್ನುವುದಾದರೆ, ತತ್‌ಕ್ಷಣಕ್ಕೇ ನೀವು ಕುರ್ಚಿ ಬಿಡಬೇಕಲ್ಲವೇ ಎಂದಿದ್ದಾರೆ.

# ಹೆತ್ತ ಮಕ್ಕಳ ತಾತ್ಸಾರಕ್ಕೆ ರೈಲಿಗೆ ತಲೆ ಕೊಟ್ಟ ದಂಪತಿ

## ಮುಪ್ಪಿನಾವಸ್ಥೆಯಲ್ಲಿ ನೋಡಿಕೊಳ್ಳದ ಮಕ್ಕಳು | ಸಾವಿನಲ್ಲೂ ಒಂದಾದ ವೃದ್ಧರು

• ಪ್ರಜೋದಯ ವರದಿ

**ಹಾಸನ:** ರೈಲ್ವೆ ಹಳಿಗೆ ಸಿಲುಕಿ ವೃದ್ಧ ದಂಪತಿ ಮೃತಪಟ್ಟಿರುವ ಘಟನೆ ನಗರದಲ್ಲಿ ಶನಿವಾರ ರಾತ್ರಿ ನಡೆದಿದ್ದು, ಸಂಧ್ಯಾ ಕಾಲದಲ್ಲಿ ಹೆತ್ತ ಮಕ್ಕಳು ನೋಡಿಕೊಳ್ಳಲಿಲ್ಲವೆಂದು ಸಾವಿನ ಕದ ತಟ್ಟಿದ್ದಾರೆಂದು ತಿಳಿದು ಬಂದಿದೆ.

ಸೋಮವಾರಪೇಟೆ ತಾಲ್ಲೂಕು ಹಾರೇಹೊಸೂರು ಗ್ರಾಮದ ಡೇನಿಯಲ್ (80) ಹಾಗು ಮೇರಿ (73) ಮೃತರು. ನಗರದ ಕರೀಗೌಡ ಕಾಲೋನಿ ಸಮೀಪದ ರೈಲ್ವೆ ಹಳಿಗೆ ತಲೆ ಕೊಟ್ಟಿದ್ದಾರೆ. ಮಧ್ಯರಾತ್ರಿ ಚಲಿಸುವ ರೈಲು ಇಬ್ಬರ ಮೇಲೆ ಹರಿದಿದೆ. ಮಕ್ಕಳಿಗೆ ಯಾವುದೇ ಕಷ್ಟ ಬಾರದ ರೀತಿ ಬೆಳಸಿ, ಆಸ್ತಿ, ಮನೆ, ಮದುವೆ ಮಾಡಿಕೊಟ್ಟರೂ ಇಳಿ ವಯಸ್ಸಿನಲ್ಲಿ ತಮ್ಮನ್ನು ಸರಿಯಾಗಿ ನೋಡಿಕೊಳ್ಳಲಿಲ್ಲ. ದಂಪತಿಗೆ ಒಂದು ಹೊತ್ತು ಅನ್ನ ಹಾಕಲಾರದಷ್ಟು ಅವರು ನಿರ್ದಯಿಗಳಾದ್ದರಿಂದ ಮನನೊಂದು ಈ ನಿರ್ಧಾರಕ್ಕೆ ಬಂದಿದ್ದಾರೆ ಎನ್ನಲಾಗಿದೆ.

ಮೇಸ್ತ್ರಿ ಕೆಲಸ ಮಾಡಿಕೊಂಡಿದ್ದ ಡೇನಿಯಲ್ ಹಾಗು ಮೇರಿ ದಂಪತಿಗೆ ನೆಲ್ಸನ್ ಹಾಗು ವಿಲ್ಸನ್ ಎಂಬ ಇಬ್ಬರು ಗಂಡು ಮಕ್ಕಳಿದ್ದಾರೆ. ಡೇನಿಯಲ್ ಅವರು ಹುಟ್ಟೂರಿನಲ್ಲಿ ಕಾಫಿ ತೋಟ, ಮನೆ ಸೇರಿ ಆಸ್ತಿ ಹೊಂದಿದ್ದರು. ಇಬ್ಬರೂ ಮಕ್ಕಳಿಗೆ ಮದುವೆ ಮಾಡಿದ್ದಾರೆ. ನೆಲ್ಸನ್ ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡಿದ್ದರೆ, ವಿಲ್ಸನ್ ಹಾರೇ ಹೊಸೂರಿನಲ್ಲಿ ಕಾಫಿ ತೋಟ ನೋಡಿಕೊಂಡಿದ್ದ. ಇತ್ತೀಚಿನ ಕೆಲವು ವರ್ಷಗಳಿಂದ ಇಬ್ಬರು ಮಕ್ಕಳು ತಂದೆ-ತಾಯಿಯನ್ನು ಆರೈಕೆ ಮಾಡಲು ಹಿಂದೇಟು ಹಾಕಿದ್ದರು. ಸಮಯಕ್ಕೆ ಸರಿಯಾಗಿ ಊಟ, ತಿಂಡಿ ಕೊಡುತ್ತಿರಲಿಲ್ಲ. ಅನಾರೋಗ್ಯ ಸಂದರ್ಭದಲ್ಲಿ ಆಸ್ಪತ್ರೆಗೆ ಕರೆದು ಕೊಂಡು ಹೋಗುತ್ತಿರಲಿಲ್ಲವೆಂದು ಗ್ರಾಮಸ್ಥರು ಗಂಭೀರ ಆರೋಪ ಮಾಡಿದ್ದಾರೆ.



ಮಕ್ಕಳು ನೋಡಿಕೊಳ್ಳದ ಹಿನ್ನಲೆಯಲ್ಲಿ ದಂಪತಿ ವಿರಾಜಪೇಟೆಯ ವೃದ್ಧಾಶ್ರಮ ಸೇರಿದ್ದರು. ಇಷ್ಟೆಲ್ಲಾ ಆಸ್ತಿ ಸಂಪಾದಿಸಿದರೂ ವೃದ್ಧಾಶ್ರಮದಲ್ಲಿ ಬದುಕಬೇಕಾಯಿತು ಎಂದು ನೊಂದಿದ್ದರು. ಅದೇ ಕೊರಗಿನಲ್ಲಿ ಶನಿವಾರ ವೃದ್ಧಾಶ್ರಮದಿಂದ ಕೆಎಸ್ ಆರ್‌ಟಿಸಿ ಬಸ್ ಹತ್ತಿ ಹಾಸನಕ್ಕೆ ಬಂದಿದ್ದ ಅವರು ಹೊಸ ಬಸ್ ನಿಲ್ದಾಣ ಸಮೀಪದ ರೈಲ್ವೆ ಹಳಿ ಮೇಲೆ ಮಲಗಿದ್ದರು. ರೈಲು ಹರಿದ ರಭಸಕ್ಕೆ ಎರಡು ಮೃತದೇಹಗಳು ತುಂಡು ತುಂಡಾಗಿ ಬಿದ್ದಿದ್ದವು. ವಿಷಯ ಗೊತ್ತಾಗಿ ರೈಲ್ವೆ ಹಾಗು ನಗರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಮೃತದೇಹಗಳನ್ನು ಹಿಮ್ಸ್‌ಗೆ ರವಾನಿಸಿದರು.

**ಅಂತ್ಯ ಸಂಸ್ಕಾರಕ್ಕೂ ಮಕ್ಕಳ ಹಿಂದೇಟು**

ಭಾನುವಾರ ಬೆಳಗಿನ ಜಾವ ಮೃತರ ಗುರುತು ಪತ್ತೆಯಾಗುತ್ತಿದ್ದಂತೆ ಮಕ್ಕಳಿಬ್ಬರಿಗೂ ಪೊಲೀಸರು ಕರೆ ಮಾಡಿ ಸ್ಥಳಕ್ಕೆ ಬರುವಂತೆ ಸೂಚಿಸಿದ್ದರು. ಆದರೆ, ಮಕ್ಕಳು ಅಂತ್ಯ ಸಂಸ್ಕಾರ ಮಾಡಲು ನಮ್ಮಿಂದ ಸಾಧ್ಯವಿಲ್ಲವೆಂದು ಕಡ್ಡಿಮುರಿದಂತೆ ಹೇಳಿದ್ದರು. ಅವರ ಮಾತಿಗೆ ಕೆರಳಿದ ಪೊಲೀಸರು ತರಾಟೆಗೆ ತೆಗೆದುಕೊಂಡ ಹಿನ್ನಲೆಯಲ್ಲಿ ಮಧ್ಯಾಹ್ನದ ವೇಳೆಗೆ ಆಗಮಿಸಿ ಮೃತದೇಹಗಳನ್ನು ಪಡೆದರು. ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಜಿಲ್ಲಾಧಿಕಾರಿ ನಿರಂತರ ಸಭೆಗೆ ಮಾಜಿ ಸಚಿವ ರೇವಣ್ಣ ಆಕ್ಷೇಪ

• ಪ್ರಜೋದಯ ವರದಿ

**ಹೊಳೆನರಸೀಪುರ :** ನಿರಂತರವಾಗಿ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಅಧಿಕಾರಿಗಳ ಸಭೆ ನಡೆಸುತ್ತಿರುವುದರಿಂದ ಗ್ರಾಮೀಣ ಭಾಗದಲ್ಲಿ ಯಾವ ಕೆಲಸಗಳೂ ಆಗುತ್ತಿಲ್ಲ. ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಈ ಸಂಬಂಧ ಪತ್ರ ಬರೆಯುತ್ತೇನೆಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಆಕ್ರೋಶ ವ್ಯಕ್ತಪಡಿಸಿದರು.

ತಾಲ್ಲೂಕು ಕಚೇರಿಯಲ್ಲಿ ವಿವಿಧ ಇಲಾಖೆ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಪದೇ ಪದೇ ಅಧಿಕಾರಿಗಳ ಸಭೆ ನಡೆಸುತ್ತಿರುವುದರಿಂದ ಸಾರ್ವಜನಿಕರು, ರೈತರು ಹಾಗು ಬಡವರ ಕೆಲಸಗಳಿಗೆ ವಿಳಂಬವಾಗುತ್ತಿದೆ. ಹಳ್ಳಿಮೈಸೂರು ಸರ್ವೆ ನಂ. 31/31ಕ್ಕೆ ಸಂಬಂಧಿಸಿದ ಭೂ ವಿವಾದ ವಿಚಾರವನ್ನು ಪ್ರಸ್ತಾಪಿಸಿದ ಅವರು, ನಾಲ್ಕು ದಶಕಗಳಿಂದ ಉಳುಮೆ ಮಾಡುತ್ತಿರುವ ವ್ಯಕ್ತಿಗೆ ತೊಂದರೆ ನೀಡಲಾಗುತ್ತಿದೆ. ತಹಶೀಲ್ದಾರ್ ಜೊತೆ ಚರ್ಚಿಸಿ ಭೂಮಾಲೀಕನಿಗೆ ನ್ಯಾಯ ಒದಗಿಸಬೇಕೆಂದು ಸೂಚಿಸಿದರು.



40 ವರ್ಷಗಳಿಂದ ಉಳುಮೆ ಮಾಡುತ್ತಿರುವ ಜಮೀನಿನ ಮಾಲೀಕರ ವಿರುದ್ಧ ದಾಖಲೆ ಇಲ್ಲದ ವ್ಯಕ್ತಿಯೊಬ್ಬ ನೀಡಿದ ದೂರಿನ ಆಧಾರದಲ್ಲಿ ಪ್ರಕರಣ ದಾಖಲಿಸಿ ಜಮೀನಿಗೆ ಹೋಗಬಾರದೆಂದು ಹೇಳುವ ಅಧಿಕಾರ ಪೊಲೀಸ್ ಅಧಿಕಾರಿಗೆ ಇದೆಯೇ ಎಂದು ಪ್ರಶ್ನಿಸಿದರು.

ತಾಲ್ಲೂಕಿನ ಬಗರ ಹುಕುಂ ಸಾಗುವಳಿದಾರರಿಗೆ ಇನ್ನೂ ಹಕ್ಕುಪತ್ರ ಸಿಕ್ಕಿಲ್ಲ. ನಿಯಮಾನುಸಾರ ಅರ್ಹರಿಗೆ ಹಕ್ಕುಪತ್ರ ನೀಡಬೇಕು. ಪಟ್ಟಣದ ಪ್ರಮುಖ ರಸ್ತೆ ಹಾಗು ವೃತ್ತಗಳಲ್ಲಿ ತಳ್ಳುಗಾಡಿ ವ್ಯಾಪಾರ ಹೆಚ್ಚಿರುವುದರಿಂದ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿದೆ. ಪೊಲೀಸರು ಕ್ರಮ ಕೈಗೊಂಡು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಕ್ರಮ ವಹಿಸಬೇಕೆಂದರು.

**ರಥೋತ್ಸವಕ್ಕೆ ಹೊಸ ಬಟ್ಟೆ ಮುಂದಿನ ವರ್ಷ**

ಮಾ.3ರಂದು ನಡೆಯಲಿರುವ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ರಥೋತ್ಸವ ಜರುಗಲಿದೆ. ಈ ಬಾರಿ ಗ್ರಹಣ ಇರುವ ಹಿನ್ನಲೆಯಲ್ಲಿ ದೇವಾಲಯ ಮಧ್ಯಾಹ್ನ 1 ರಿಂದ ಸಂಜೆ 6ರ ವರೆಗೆ ಮುಚ್ಚಲಿದೆ. ಸಂಜೆ 6 ರಿಂದ ರಾತ್ರಿ 12ರ ವರೆಗೆ ಮಾತ್ರ ದರ್ಶನ ಹಾಗು ಪ್ರಸಾದ ವ್ಯವಸ್ಥೆ ಇರಲಿದೆ ಎಂದು ತಿಳಿಸಿದರು.

ಈ ವರ್ಷ ಗ್ರಹಣ ಇರುವುದರಿಂದ ಹೊಸ ಬಟ್ಟೆ ಹಾಕಲು ಸಾಧ್ಯವಿಲ್ಲ. ಮುಂದಿನ ವರ್ಷ ಸಾರ್ವಜನಿಕರಿಂದ ಹಣ ಸಂಗ್ರಹಿಸಿ ಹೊಸ ಬಟ್ಟೆ ಹಾಕಲಾಗುವುದು. ಅವಕಾಶ ಕೆಲವರಿಗೆ ಮಾತ್ರ ಸೀಮಿತವಾಗದೆ ಎಲ್ಲರಿಗೂ ದೊರಕಬೇಕೆಂದರು.


# ಕಾಳು ಮೆಣಸಿನತ್ತ ಚಿತ್ತ ಹರಿಸಿದ ಹಸಿರುವಾಣಿ ವ್ಯಾಪಾರಿಗಳು

## ಕಳೆದ ವರ್ಷದ ಬೆಲೆ ನಂಬಿ ಖರೀದಿಸಿದವರಿಗೆ ನಷ್ಟ | ಬಂಡವಾಳ ಹಾಕಿ ಕೈ ಸುಟ್ಟುಕೊಂಡರು

• ಪ್ರಜೋದಯ ವರದಿ

**ಹಾಸನ:** ಕಳೆದ ವರ್ಷ ಕಾಫಿಗೆ ಬಂಪರ್ ಬೆಲೆ ದೊರೆತಿದ್ದರಿಂದ ಬಂಡವಾಳ ಹೂಡಿದ್ದ ಹಸಿರುವಾಣಿ ವ್ಯಾಪಾರಿಗಳು ಪ್ರಸಕ್ತ ದಿನಗಳಲ್ಲಿ ನಿರೀಕ್ಷಿತ ಮಟ್ಟದಲ್ಲಿ ಬೆಲೆ ಇಲ್ಲದೆ ನಷ್ಟದ ಅಪಾಯಕ್ಕೆ ಸಿಲುಕಿದ್ದು, ಕಾಫಿ ಬಿಟ್ಟು ಕಾಳು ಮೆಣಸಿನತ್ತ ಗಮನ ಹರಿಸಿದ್ದಾರೆ.

ಕಾಫಿ ತೋಟಗಳಲ್ಲಿ ಫಸಲು ಇರುವಾಗಲೇ ಬೆಲೆ ನಿಗದಿಪಡಿಸಿ ಖರೀದಿಸುವುದು. ನಂತರ ಅದನ್ನು ಕೊಯ್ಲು ಮಾಡಿಕೊಂಡು ಲಾಭ ಮಾಡಿಕೊಳ್ಳುವುದು ಹಸಿರುವಾಣಿಯ ಉದ್ದೇಶ. ಬೆಳೆ ಹಸಿರಾಗಿದ್ದಾಗಲೇ ವ್ಯಾಪಾರ ಮಾಡುವ ಪ್ರವೃತ್ತಿಗೆ ಹಸಿರುವಾಣಿ ಎನ್ನಲಾಗುತ್ತದೆ. ಕಳೆದ ಐದಾರು ವರ್ಷಗಳಿಂದ ಹಾಸನ, ಚಿಕ್ಕಮಗಳೂರು, ಕೊಡಗು ಭಾಗದಲ್ಲಿ ಈ ಪದ್ಧತಿ ಚಾಲ್ತಿಗೆ ಬಂದಿದೆ. ಆರಂಭದಲ್ಲಿ ಈ ರೀತಿಯ ವ್ಯಾಪಾರದಲ್ಲಿ ತೊಡಗುವವರ ಸಂಖ್ಯೆ ಕಡಿಮೆ ಇತ್ತಾದರೂ ಇತ್ತೀಚೆಗೆ ಅಧಿಕ ಪ್ರಮಾಣದ ವ್ಯಾಪಾರಿಗಳು ಹುಟ್ಟಿಕೊಂಡಿದ್ದರು.



ಕಳೆದ ವರ್ಷ ಕಾಫಿ ಕೊಯ್ಲು ನಡೆಸುವ ವೇಳೆ 12 ಸಾವಿರ ರೂ. ಬೆಲೆ ಇದ್ದ ಕಾರಣ ಈ ವರ್ಷವೂ ಅದೇ ಬೆಲೆ ಸಿಗಬಹುದು ಅಥವಾ ಹೆಚ್ಚಾಗಬಹುದೆಂದು ಭಾವಿಸಿ ಹಸಿರುವಾಣಿ ಪಡೆದಿದ್ದ ವ್ಯಾಪಾರಿಗಳಿಗೆ ಸದ್ಯದ ಬೆಲೆ ಇಳಿಕೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಸಾಮಾನ್ಯವಾಗಿ ಕಳೆದ ವರ್ಷ ಪಡೆದ ಕಾಫಿ ತೋಟಗಳನ್ನೇ ಪ್ರತಿ ವರ್ಷ ಕೆಲವು ಹಸಿರುವಾಣಿ ವ್ಯಾಪಾರಿಗಳು ಪಡೆಯುತ್ತಿದ್ದು, ಕಳೆದ ವರ್ಷದ ಬೆಲೆ, ಇಳುವರಿ ಹಾಗು ಔಟ್‌ಟನ್ ಲೆಕ್ಕಚಾರದಲ್ಲಿ ಬೆಲೆ ನಿಗದಿಯಾಗುತ್ತಿದೆ. ಆದರೆ, ಈ ಔಟ್‌ಟನ್ ಭಾರೀ ಪ್ರಮಾಣದಲ್ಲಿ ಕುಸಿದಿದ್ದರೆ ಬೆಲೆ ಕಳೆದ ಎರಡು ವರ್ಷಕ್ಕೆ ಕುಸಿತಗೊಂಡಿದೆ. ಅಲ್ಲದೆ ಇಳುವರಿ ಬಹುತೇಕ ಕಾಫಿ ಬೆಳೆಗಾರರಿಗೆ ಶೇ.20 ರಿಂದ 40 ರಷ್ಟು ಕುಸಿದಿದೆ. ಅದರಿಂದ ಬಂಡವಾಳ ಹಾಕಿ ಲಾಭದ ನಿರೀಕ್ಷೆಯಲ್ಲಿದ್ದ ಬೆಳೆಗಾರರಿಗೆ ನಷ್ಟದ ಭೀತಿ ಎದುರಾಗಿದ್ದು ಕೊಯ್ಲು ನಡೆಸಿರುವ ಸಾಕಷ್ಟು ಹಸಿರುವಾಣಿ ವ್ಯಾಪಾರಿಗಳು ತಮ್ಮ ಉತ್ಪನ್ನವನ್ನು ಮಾರಾಟ ಮಾಡದೆ ಬೆಲೆ ಏರಿಕೆಯ ನಿರೀಕ್ಷೆಯಲ್ಲಿ ದಾಸ್ತಾನಿಟ್ಟುಕೊಂಡಿದ್ದಾರೆ.

**ಬೆಲೆ ಏರಿಳಿತ ವ್ಯಾಪಾರಿ ಕಂಗಾಲು**

2023ರಲ್ಲಿ 6 ರಿಂದ 12 ಸಾವಿರ ರೂ. ತಲುಪಿದ್ದ 50 ಕೆ.ಜಿ. ರೋಬಸ್ಟಾ ಕಾಫಿ ಬೆಲೆ 2024ರಲ್ಲಿ 8 ರಿಂದ 13 ಸಾವಿರ ಗಡಿ ತಲುಪಿತ್ತು. 2025ರಲ್ಲಿ 10 ರಿಂದ 12 ಸಾವಿರ ರೂ. ಸನಿಹದಲ್ಲಿ ಮಾರುಕಟ್ಟೆ ದರ ಪ್ರಸ್ತುತ 10 ಸಾವಿರ ರೂ. ಆಸುಪಾಸಿನಲ್ಲಿದೆ. ಪ್ರತಿ 50 ಕೆ.ಜಿ. ರೋಬಸ್ಟಾ ಕಾಫಿ ಧಾರಣೆ 8 ಸಾವಿರದಿಂದ 10 ಸಾವಿರ ರೂ. ಒಳಗಿರುವುದರಿಂದ ವ್ಯಾಪಾರಿಗಳು ನಷ್ಟದ ಭೀತಿಯಲ್ಲಿದ್ದಾರೆ. ಹೀಗಾಗಿ ಕಾಫಿ ಬದಲಿಗೆ ಕಾಳು ಮೆಣಸಿನ ಹಸಿರುವಾಣಿ ವ್ಯಾಪಾರದಲ್ಲಿ ಬಹುತೇಕರು ತೊಡಗಿಸಿಕೊಂಡಿದ್ದಾರೆ. ಅದರಿಂದಾಗಿ ಕಾಫಿ ಹಸಿರುವಾಣಿಯಲ್ಲಿ ಉಂಟಾಗುತ್ತಿದ್ದ ನಷ್ಟದಿಂದ ತಪ್ಪಿಸಿಕೊಂಡಿದ್ದಾರೆ.

### ಕಾಳು ಮೆಣಸು ಕೆ.ಜಿ.ಗೆ 700 ರೂ.

ಕಾಳು ಮೆಣಸಿನ ಬೆಲೆ 2024 ರ ನಂತರ ಸ್ಥಿರವಾಗಿದೆ. 2023 ಹಾಗು 2024ರ ಮಾರುಕಟ್ಟೆಯಲ್ಲಿ ಪ್ರತಿ ಕೆ.ಜಿ. ಕಾಳು ಮೆಣಸಿನ ಧಾರಣೆ 400 ರಿಂದ 700 ರೂ. ಸನಿಹಕ್ಕೆ ತಲುಪಿದ್ದಲ್ಲದೆ ಸಾವಿರ ರೂ.ಗೆ ತಲುಪಲಿದೆ ಎಂಬ ಮಾತು ಕೇಳಿ ಬರುತ್ತಿತ್ತು. ಅದರಿಂದಾಗಿ ಹಲವು ವ್ಯಾಪಾರಿಗಳು 700 ರೂ.ನಂತೆ ಖರೀದಿಸಿ ಶೇಖರಿಸಿಟ್ಟಿದ್ದರು. ಆದರೆ, 2024 ಮೆಣಸು ಕೊಯ್ಲು ಆರಂಭವಾಗುವ ವೇಳೆಗೆ ಮೆಣಸಿನ ಧಾರಣೆ ಕುಸಿತಗೊಂಡು 500 ರೂ. ಸನಿಹಕ್ಕೆ ಬಂದಿತ್ತು. ಪ್ರಸ್ತುತ 700 ರೂ. ಆಸುಪಾಸಿನಲ್ಲಿ ಬೆಲೆ ನಿಗದಿಯಾಗಿದ್ದು, ಹಸಿರುವಾಣಿ ವ್ಯಾಪಾರಿಗಳಿಗೆ ಆತಂಕ ದೂರವಾಗಿದೆ.

# ಜೂನ್ ಒಳಗೆ ಜಿ.ಪಂ.-ತಾ.ಪಂ ಚುನಾವಣೆ: ಸಿ.ಎಂ.

• ಪ್ರಜೋದಯ ವರದಿ



**ಬೆಂಗಳೂರು:** ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆ ಯನ್ನು ಜೂನ್ ಒಳಗೆ ನಡೆಸಲಾಗುವುದೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ಅಂಕೋಲಾ ತಾಲ್ಲೂಕಿನ ಮಂಜಗುಣಿಯಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗೋಕರ್ಣವನ್ನು ಪಟ್ಟಣ ಪಂಚಾಯಿತಿ ಮೇಲ್ದರ್ಜೆಗೇರಿಸಲು ಬೇಡಿಕೆ ಇದೆ. ಆದರೆ, ಚುನಾವಣೆಗಳು ಸಮೀಪಿಸುತ್ತಿವೆ. ಜನಗಣತಿಯೂ ನಡೆಯಲಿದೆ. ಹೀಗಾಗಿ, ಸದ್ಯ ಹೊಸದಾಗಿ ಪಟ್ಟಣ ಪಂಚಾಯಿತಿ ರಚನೆ ಸಾಧ್ಯವಾಗದು. ಚುನಾವಣೆಗಳು ಮುಗಿದ ಬಳಿಕ ಗೋಕರ್ಣ ಪಟ್ಟಣ ಪಂಚಾಯಿತಿ ರಚನೆ ಮಾಡಲಾಗುವುದೆಂದರು.

ಹಾಲಕ್ಕಿ ಒಕ್ಕಲಿಗರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಪ್ರಸ್ತಾವವನ್ನು ಕೇಂದ್ರ ಸರ್ಕಾರ ತಿರಸ್ಕರಿಸಿದೆ. ಪುನರ್ ಪ್ರಸ್ತಾವ ಸಲ್ಲಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ ಎಂದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ಕರಾವಳಿ ಭಾಗದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಹೊಸ ನೀತಿ ರೂಪಿಸಲಾಗುತ್ತಿದೆ. ಗೋವಾಕ್ಕಿಂತ ಕರ್ನಾಟಕದತ್ತ ಪ್ರವಾಸಿಗರನ್ನು ಸೆಳೆಯುವಂತೆ ಯೋಜನೆಗಳನ್ನು ಕಾರ್ಯಗತ ಮಾಡಲಾಗುವುದೆಂದರು.


# ನವಿಲೆ ನಾಗೇಶ್ವರಸ್ವಾಮಿ ದೇವಾಲಯ ಅಭಿವೃದ್ಧಿಗೆ ಮನವಿ

• ಪ್ರಜೋದಯ ವರದಿ

**ನುಗ್ಗೇಹಳ್ಳಿ:** ನವಿಲೆ ಶ್ರೀ ನಾಗೇಶ್ವರಸ್ವಾಮಿ ದೇವಾಲಯ ಪುಣ್ಯಕ್ಷೇತ್ರವಾಗಿ ಖ್ಯಾತಿ ಪಡೆದಿದ್ದು, ದೇವಾಲಯದ ಸಮಗ್ರ ಅಭಿವೃದ್ಧಿಗೆ ಸರ್ಕಾರ ಸಹಕಾರ ನೀಡಬೇಕೆಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಕೋರಿದರು.

ಹೋಬಳಿಯ ನವಿಲೆ ಗ್ರಾಮದಲ್ಲಿ ಭಾನುವಾರ ಏರ್ಪಡಿಸಿದ್ದ ಶ್ರೀ ನಾಗೇಶ್ವರಸ್ವಾಮಿ ಹಾಗು ಶ್ರೀ ಕೆಂಪಮ್ಮದೇವಿ ನೂತನ ರಥ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿದ ಅವರು, ಮುಜರಾಯಿ ಇಲಾಖೆ, ಗ್ರಾಮಸ್ಥರು, ಎಲ್ಲಾ ಪಕ್ಷದ ಮುಖಂಡರು ಹಾಗು ಉದ್ಯಮಿಗಳ ಸಹಕಾರದಿಂದ 90 ಲಕ್ಷ ರೂ. ವೆಚ್ಚದಲ್ಲಿ ನೂತನ ರಥ ನಿರ್ಮಾಣಗೊಂಡಿದೆ ಎಂದರು.

ರಥ ನಿರ್ಮಾಣಕ್ಕೆ ಸರ್ಕಾರದಿಂದ 20 ಲಕ್ಷ ರೂ. ಅನುದಾನ ನೀಡಲಾಗಿದೆ. ವೈಯಕ್ತಿಕವಾಗಿ 5 ಲಕ್ಷ ರೂ. ಸಹಾಯ ಮಾಡಿದ್ದೇನೆ. ಉದ್ಯಮಿಗಳಾದ ಅಣತಿ ಯೋಗೇಶ್ 2 ಲಕ್ಷ ರೂ. ಹಾಗು ಮರುವನಹಳ್ಳಿ ದೇವರಾಜ್ 1 ಲಕ್ಷ ರೂ. ದೇಣಿಗೆ ನೀಡಿದ್ದಾರೆಂದರು.



ದೇವಾಲಯದಲ್ಲಿ ಪ್ರತಿದಿನ ಭಕ್ತರಿಗೆ ಅನ್ನದಾಸೋಹ ನಡೆಯುತ್ತಿದ್ದು, ದೇವಾಲಯದ ಬ್ಯಾಂಕ್ ಖಾತೆಯಲ್ಲಿ 4 ಕೋಟಿ ರೂ. ಹಣವಿದೆ. ಈ ಹಣವನ್ನು ನಾಗೇಶ್ವರಸ್ವಾಮಿ ಕಲ್ಯಾಣ ಮಂಟಪ ನಿರ್ಮಾಣಕ್ಕೆ ಬಳಸಲಾಗುವುದು. ದೇವಾಲಯ ಮುಂಭಾಗ ರಾಜ

» ನಾಲ್ಕನೇ ಪುಟದಲ್ಲಿ

# ಮನೆ ಕಳವಿಗೆ ಯತ್ನಿಸಿದ ಅಂತರ್ ರಾಜ್ಯ ಕಳ್ಳನ ಬಂಧನ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮನೆ ಕಳ್ಳತನಕ್ಕೆ ಬಂದಿದ್ದ ಕಿಡಿಗೇಡಿಗಳು ಕುಟುಂಬಸ್ಥರು ಕೂಗಾಡಿದ್ದಕ್ಕೆ ಓಡಿ ಹೋಗಲು ಯತ್ನಿಸಿದ್ದು, ಒಬ್ಬನನ್ನು ಸಾರ್ವಜನಿಕರು ಹಿಡಿದು ಥಳಿಸಿರುವ ಘಟನೆ ಪಟ್ಟಣದ ಗಾಂಧಿ ವೃತ್ತದ ಮನೆಯೊಂದರಲ್ಲಿ ನಡೆದಿದೆ.

ಪಟ್ಟಣದ ಸಂತೋಷ್ ಎಂಬುವವರ ಮನೆ ಬಳಿ ಶನಿವಾರ ರಾತ್ರಿ ಬಂದಿದ್ದ ಐವರು ಆಯುಧದಿಂದ ಎರಡು ಬಾಗಿಲುಗಳನ್ನು ಮುರಿದು ಒಳನುಗ್ಗಿದ್ದಾರೆ. ಸಂತೋಷ್ ಅವರ ಪತ್ನಿ ಮೊಬೈಲ್ ಸಿಸಿ ಕ್ಯಾಮರಾದಲ್ಲಿ ಕಳ್ಳರು ಒಳ ನುಗ್ಗಿರುವುದನ್ನು ಗಮನಿಸಿ ಕೂಡಲೇ ಸಂತೋಷ್ ಮತ್ತು ಮಗ ಸುಹಾಸ್‌ಗೆ ತಿಳಿಸಿದಾಗ ಅವರು ಮನೆಯ ಹತ್ತಿರ ಬಂದು ಕೂಗಾಡಿದಾಗ ಕಳ್ಳರು ಮನೆ ಹಿಂಭಾಗದ ಕಾಂಪೌಂಡ್ ಹಾರಿ ಓಡಿ ಹೋಗಲು ಪ್ರಯತ್ನಿಸಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಜಮಾಯಿಸಿದ ಸ್ಥಳೀಯರು ಒಬ್ಬನನ್ನು ಹಿಡಿದು ಹಿಗ್ಗಾಮುಗ್ಗಾ ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ. ಬಂಧಿತ ಆರೋಪಿಯನ್ನು ಮುಂಬೈನ ಶಕೀರ್ ಅಹ್ಮದ್ ಎಂದು ಗುರುತಿಸಲಾಗಿದೆ. ತಪ್ಪಿಸಿಕೊಂಡು ಓಡಿದ ಆರೋಪಿ ಪಿಸ್ತೂಲ್ ತೋರಿಸಿದ್ದಾನೆ. ಮನೆಯ ಸಿಸಿಟಿವಿ ದೃಶ್ಯಾವಳಿ ಪರಿಶೀಲಿಸಿರುವ ಪೊಲೀಸರು ಆರೋಪಿ ಬಂಧನಕ್ಕೆ ಬಲೆ ಬೀಸಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ವಾಡಿಕೆಗಿಂತ ಅಧಿಕ ತಾಪಮಾನ: ಮುನ್ಸೂಚನೆ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದಲ್ಲಿ ಈ ವರ್ಷ ಬೇಸಿಗೆ ಅವಧಿಯಲ್ಲಿ ವಾಡಿಕೆಗಿಂತ ಅಧಿಕ ತಾಪಮಾನ ವರದಿಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕಲಬುರಗಿ, ಹಾವೇರಿ, ಬಾಗಲಕೋಟೆ, ಶಿವಮೊಗ್ಗಾ, ಉತ್ತರ ಕನ್ನಡ ಸೇರಿ ಹಲವು ಜಿಲ್ಲೆಗಳಲ್ಲಿ ಗರಿಷ್ಠ ತಾಪಮಾನ ಈಗಾಗಲೇ ವಾಡಿಕೆಗಿಂತ ಅಧಿಕವಾಗಿದೆ ಎಂದು ವರದಿಯಾಗುತ್ತಿದೆ. ಬಹುತೇಕ ಜಿಲ್ಲೆಗಳಲ್ಲಿ ಗರಿಷ್ಠ ಉಷ್ಣಾಂಶ 35 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿದ್ದರೆ, ಕಲಬುರಗಿ ಯಲ್ಲಿ 36 ಡಿಗ್ರಿ ಸೆಲ್ಸಿಯಸ್ ತಲುಪಿದೆ. ಕೆಲವೆಡೆ ವಾಡಿಕೆಗಿಂತ 3 ಡಿಗ್ರಿ ಸೆಲ್ಸಿಯಸ್ ವರೆಗೂ ಹೆಚ್ಚು ವರದಿಯಾಗುತ್ತಿದೆ. ಜಾಗತಿಕ ತಾಪಮಾನ ಏರಿಕೆ, ತೇವಾಂಶ ಕೊರತೆ ಸೇರಿ ವಿವಿಧ ಕಾರಣಗಳಿಂದ ಏಪ್ರಿಲ್ ಮತ್ತು ಮೇಯಲ್ಲಿ ಗರಿಷ್ಟ ತಾಪ ಮಾನವು ವಾಡಿಕೆಗಿಂತ 4-5 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗ ಬಹುದೆಂದು ಹವಾಮಾನ ಇಲಾಖೆ ವಿಶ್ಲೇಷಿಸಿದೆ.

## ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಸಾಹಿತಿ ಡಾ.ಕಾಳೇಗೌಡ ನಾಗಾವರ ಅಭಿಮತ


# ಅನೇಕರ ಹೋರಾಟದಿಂದ ಸಮಾಜ ನಿರ್ಮಾಣ

• ಪ್ರಜೋದಯ ವರದಿ

**ಹಾಸನ:** ಅಸ್ಪೃಶ್ಯತೆ, ಜಾತಿ ತಾರತಮ್ಯ, ಸ್ತ್ರೀ ಅಸಮಾನತೆ ವಿರುದ್ಧ ಪ್ರತಿ ಕಾಲಘಟ್ಟದಲ್ಲೂ ದಾರ್ಶನಿಕರು ಹೋರಾಟ ನಡೆಸಿದ್ದು, ಅದನ್ನು ಅರಿತು ಮುನ್ನಡೆಯಬೇಕಿದೆ ಎಂದು ಸಾಹಿತಿ ಡಾ.ಕಾಳೇಗೌಡ ನಾಗಾವರ ಅವರು ಹೇಳಿದರು.

ನಗರದ ಎಂ.ಜಿ.ರಸ್ತೆಯಲ್ಲಿರುವ ಗಾಂಧಿ ಭವನದಲ್ಲಿ ಭಾನುವಾರ ನಡೆದ ಮೂರು ಪುಸ್ತಕಗಳ ಬಿಡುಗಡೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಲೋಹಿಯಾ, ಪೆರಿಯಾರ್, ಡಾ.ಬಿ.ಆರ್. ಅಂಬೇಡ್ಕರ್, ಬಸವಣ್ಣ, ಮಹಾತ್ಮ ಗಾಂಧೀಜಿ, ಕೊಡಗಿನ ಗೌರಮ್ಮ ಹೀಗೆ ಅನೇಕರು ತಮ್ಮದೇಯಾದ ಹೋರಾಟದ ಮೂಲಕ ಸಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ್ದಾರೆಂದರು.

ಮಹಾತ್ಮ ಗಾಂಧೀಜಿ ಆಮರಣಾಂತ ಉಪವಾಸ ಕೈಗೊಂಡಿದ್ದಾಗ ಸತ್ಯಾಗ್ರಹ ವಾಪಾಸ್ ಪಡೆಯದಿದ್ದರೆ ಹಿಂದುಳಿದ ಸಮಾಜ ಸಂಕಷ್ಟಕ್ಕೆ ಸಿಲುಕಬೇಕಾಗುತ್ತದೆಂದು ಡಾ.ಬಿ.ಆರ್. ಅಂಬೇಡ್ಕರ್ ಹೇಳಿದಾಗ ಗಾಂಧೀಜಿ ಅವರು, ನಾನು ಹಿಂದುಳಿದವರ ದತ್ತು ಮಗ ಅವರ ಕಷ್ಟಗಳೆಲ್ಲಾ ಗೊತ್ತು ಎಂದಿದ್ದರು. ಅದಕ್ಕೆ ಅಂಬೇಡ್ಕರ್ ಅವರು, ನೀವು ದತ್ತು ಮಗ ಮಾತ್ರ ನಾನು ಮನೆ ಮಗ ಎಂದು ಗಾಂಧೀಜಿ ಅವರ ಮನವೊಲಿಸಿದ್ದರು. ಅದೇ ರೀತಿ ಕೊಡಗಿನ ಗೌರಮ್ಮ ಗಾಂಧೀಜಿಗೆ ವೇದಿಕೆಯಿಂದ ಕೆಳಗಿಳಿದು ಹೋರಾಡಿ ಎಂದು ಸಲಹೆ ನೀಡಿದ್ದರು. ಇದೇ ರೀತಿ ಅನೇಕ ನಿದರ್ಶನಗಳು ನಮ್ಮ ನಡುವೆ ಇದ್ದು, ಇತಿಹಾಸವನ್ನು ಯುವ ಸಮಾಜ ಅರಿಯಬೇಕೆಂದರು.



ರಾಜ್ಯದ ಪ್ರತಿ ಜಿಲ್ಲೆಗೂ ತನ್ನದೇಯಾದ ವೈಶಿಷ್ಟ್ಯವಿದೆ. ಪತ್ರಕರ್ತ ಉದಯರವಿ ಅವರು ಹಾಸನ ಜಿಲ್ಲಾ ವೈಶಿಷ್ಟ್ಯ ಎಂಬ ಪುಸ್ತಕ ಬರೆದಿದ್ದು, ಸಂಗ್ರಹಕ್ಕೆ ಯೋಗ್ಯವಾಗಿದೆ. ಹಾಸನ ರಾಜ್ಯದ ಪ್ರಮುಖ ಜಿಲ್ಲೆಗಳಲ್ಲಿ ಒಂದಾಗಿದೆ. ರಾಜಕೀಯ, ಸಾಂಸ್ಕೃತಿಕ, ಸಾಹಿತ್ಯ, ಕಲೆ, ಕ್ರೀಡೆ, ಪತ್ರಿಕೋದ್ಯಮ ಹೀಗೆ ನಾನಾ ಕ್ಷೇತ್ರಗಳಲ್ಲಿ ಜಿಲ್ಲೆ ಗುರುತರ ಸಾಧನೆ ಮಾಡಿದೆ. ಗೊರೂರು ರಾಮಸ್ವಾಮಿ ಅಯ್ಯಂಗಾರ್, ಡಾ.ಎಸ್.ಎಲ್.ಭೈರಪ್ಪ, ಎಸ್.ಕೆ.ಕರೀಂಖಾನ್‌ರಂತಹ ಸಾಹಿತಿಗಳು ಹುಟ್ಟಿರುವ ಶ್ರೇಷ್ಠ ಜಿಲ್ಲೆ ಇದಾಗಿದೆ ಎಂದರು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ. ಆರ್.ಕೆಂಚೇಗೌಡ ಅವರು ಮಾತನಾಡಿ, ಉದಯರವಿ ಮತ್ತು ನಾನು ಬಾಲ್ಯದ ಗೆಳೆಯರು. ಅವರ ಜೀವನದ ಏಳುಬೀಳುಗಳಲ್ಲಿ ನಾನು ಸಾಕ್ಷಿಯಾಗಿದ್ದೇನೆ. ಪತ್ರಕರ್ತರಾಗಿ ಸದಾ ಬರವಣಿಗೆಯಲ್ಲಿ ತೊಡಗಿರುವ ಅವರ ಸಾಹಿತ್ಯ ಕೃಷಿ ಹೀಗೆ ಮುಂದುವರಿಯಲಿ ಎಂದು ಶುಭ ಹಾರೈಸಿದರು.

ಜಿಲ್ಲಾ ವೈಶಿಷ್ಟ್ಯ ಕೃತಿ ಕುರಿತು ಕನ್ನಡ ಪ್ರಾಧ್ಯಾಪಕ ಡಾ.ಜಯಶಂಕರ ಹಲಗೂರು ಅವರು ಮಾತನಾಡಿ, ಯಾವ ಜಿಲ್ಲೆಯಾದರೂ ಅದಕ್ಕೆ ತನ್ನದೇಯಾದ ವೈಶಿಷ್ಟ್ಯತೆ ಇರುತ್ತದೆ. ಅದನ್ನು ಬಹಳ ಸೊಗಸಾಗಿ ಉದಯರವಿ ಅವರು ಪುಸ್ತಕ ರೂಪದಲ್ಲಿ ಕಟ್ಟಿಕೊಟ್ಟಿದ್ದಾರೆ. ಇದು ಭವಿಷ್ಯದ ಪೀಳಿಗೆಗೆ ಆಕರ ಗ್ರಂಥವಾಗಲಿದೆ. ಜಿಲ್ಲೆಯ ಇತಿಹಾಸ, ಸಂಸ್ಕೃತಿ, ರಾಜಕೀಯವನ್ನು ಸೂಕ್ಷ್ಮವಾಗಿ ತಿಳಿಸಿಕೊಡುವ ಅತ್ಯುತ್ತಮ ಕೃತಿ ಇದಾಗಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ರಾಜಕೀಯ ಮುನ್ನಲೆಗೆ ಬಂದು ಸಾಂಸ್ಕೃತಿಕ ಚಟುವಟಿಕೆ ತೆರೆಮರೆಗೆ ಸರಿಯುತ್ತಿದೆ. ಮನುಷ್ಯನ ಅಸ್ತಿತ್ವ ಕಂಡುಬರುವುದು ಸಾಂಸ್ಕೃತಿಕ ಪ್ರಭಾವದಿಂದ ಎಂಬುದು ಸತ್ಯ. ಆದರೆ ಅದಕ್ಕೆ ಪ್ರೋತ್ಸಾಹ ಸಿಗುತ್ತಿಲ್ಲ. ಸಾಂಸ್ಕೃತಿಕ ಒರತೆಗಳು ಜನಮಾನಸದಲ್ಲಿ ಯಾವಾಗಲೂ ಇರಬೇಕೆಂದು ಪ್ರತಿಪಾದಿಸಿದರು.

ಸಾಹಿತಿ ಕೃಷ್ಣಹಾನುಬಾಳು ಅವರ ಬರೆದ ಏಳು ಬೀಳಿನ ಹಾದಿಯಲ್ಲಿ ಕೃತಿ ಕುರಿತು ಸಾಹಿತಿ ಡಾ.ರಾಮಲಿಂಗೇಶ್ವರ ಮತ್ತು ಜಯಂತಿ ಚಂದ್ರಶೇಖರ್ ಅವರ ನಿರ್ಲಿಪ್ತ ಕಾದಂಬರಿ ಕುರಿತು ಪತ್ರಕರ್ತ ಕೆ.ಆರ್.ನೀಲಕಂಠ ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ ಮಾಜಿ ಜಿಲ್ಲಾಧ್ಯಕ್ಷ ಉದಯರವಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಜಾನಪದ ವಿದ್ವಾಂಸ ಚಂದ್ರು ಕಾಳೇನಹಳ್ಳಿ ಅಧ್ಯಕ್ಷತೆ ವಹಿಸಿದ್ದರು. ಹಿಮ್ಸ್ ಪ್ರಾಂಶುಪಾಲ ಡಾ|| ಬಿ.ಸಿ.ರವಿಕುಮಾರ್ ಮತ್ತಿತರರಿದ್ದರು.

# ಹೇಮಾವತಿ ನದಿಯಲ್ಲಿ ಅಪರಿಚಿತ ಶವ ಪತ್ತೆ



• ಪ್ರಜೋದಯ ವರದಿ

**ಹಾಸನ:** ಅಪರಿಚಿತ ವ್ಯಕ್ತಿಯ ಶವ ತಾಲ್ಲೂಕಿನ ಕೋನಾಪುರ ಐಲ್ಯಾಂಡ್‌ನ ಹೇಮಾವತಿ ನದಿಯಲ್ಲಿ ಭಾನುವಾರ ಪತ್ತೆಯಾಗಿದೆ.

ಅಂದಾಜು 40 ವರ್ಷದ ವ್ಯಕ್ತಿಯ ಶವ ನೀರಿನಲ್ಲಿ ತೇಲುತ್ತಿದ್ದು, ಆತ್ಮಹತ್ಯೆಯೋ ಅಥವಾ ಕೊಲೆಯೋ ಎಂಬ ಶಂಕೆ ವ್ಯಕ್ತವಾಗಿದೆ. ಬೆಳಿಗ್ಗೆ ಜಮೀನು ಕೆಲಸಕ್ಕೆ ತೆರಳುತ್ತಿದ್ದ ಸ್ಥಳೀಯರು ಗಮನಿಸಿ ಗೊರೂರು ಪೊಲೀಸರಿಗೆ ಮಾಹಿತಿ ನೀಡಿದರು. ಅಗ್ನಿಶಾಮಕ ಸಿಬ್ಬಂದಿ ಶವವನ್ನು ಹೊರತೆಗೆದು ಹಿಮ್ಸ್‌ನ ಶವಾಗಾರಕ್ಕೆ ರವಾನಿಸಿದರು. ಗೊರೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಬೇಡ ಪರೀಕ್ಷೆ ಭಯ: ಇರಲಿ ಸಂಭ್ರಮ

**ಇದೇ ಫೆ.28 ರಿಂದ ಪಿಯುಸಿ ಹಾಗು ಮಾ.18 ರಿಂದ ಎಸ್ ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಗಳು ಆರಂಭವಾಗಲಿವೆ. ವಿದ್ಯಾರ್ಥಿಗಳ ಪಾಲಿಗೆ ಈ ಪರೀಕ್ಷೆಗಳು ಮಹತ್ವದ ಮೈಲು ಗಲ್ಲು. ಒಂದು ವರ್ಷಗಳ ಕಾಲ ಸತತ ಪರಿಶ್ರಮ ಪಟ್ಟು ಪ್ರತಿಭೆಯನ್ನು ಅನಾವರಣಗೊಳಿಸುವ ಮಹತ್ವದ ಸಂದರ್ಭ ಇದಾಗಿದ್ದು, ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳು ಅನುಸರಿಸಬೇಕಾದ ನಿಯಮಗಳ ಕುರಿತು ಆಪ್ತ ಸಲಹಾ ಮನ: ಶಾಸ್ತ್ರಜ್ಞ ಎನ್.ಆರ್.ಪ್ರಶಾಂತ್ ಅವರ ಲೇಖನ ಇಲ್ಲಿದೆ.**



ವಿದ್ಯಾರ್ಥಿಗಳೆಲ್ಲರಿಗೂ ಸಂಭ್ರಮ ಸಡಗರ. ಏಕೆಂದರೆ ವರ್ಷಕ್ಕೊಮ್ಮೆ ಬರುವ ವಾರ್ಷಿಕ ಪರೀಕ್ಷೆಗೆ ತಯಾರಿ ನಡೆಯುತ್ತಿರುತ್ತದೆ. ಹೌದು ಪರೀಕ್ಷೆಯನ್ನು ವರುಷಕ್ಕೊಮ್ಮೆ ಆಚರಿಸುವ ಹಬ್ಬದಂತೆ ಸಂತೋಷದಿಂದ ಎದುರಿಸಬೇಕು. ಅದಕ್ಕಾಗಿ ತಯಾರಿ ಮಾಡಿಕೊಳ್ಳಬೇಕಲ್ಲವೆ? ಮೊದಲನೆಯದಾಗಿ ಅಧ್ಯಯನದಲ್ಲಿ ಹೇಗೆ ತೊಡಗಿಸಿಕೊಳ್ಳಬೇಕೆಂದು ತಿಳಿಯೋಣ. ಪ್ರಪ್ರಥಮವಾಗಿ ಅಧ್ಯಯನ ಮಾಡಲು ಒಂದು ಪ್ರತ್ಯೇಕ ಸ್ಥಳವನ್ನು ನಿಗದಿಪಡಿಸಿಕೊಳ್ಳಬೇಕು. ಪರೀಕ್ಷೆಗಾಗಿ ನೀವು ತಯಾರಿ ನಡೆಸುವುದಾದರೆ ನೀವು ನಿಗದಿಪಡಿಸಿಕೊಂಡ ಸ್ಥಳದಲ್ಲಿಯೇ ಕುಳಿತು ಓದಬೇಕು, ಆ ಸ್ಥಳದಲ್ಲಿ ಕುಳುತು ಬೇರೆ ಮತ್ತೆ ಯಾವ ಕೆಲಸಗಳನ್ನು ಮಾಡಬಾರದು, ಅಂದರೆ ಅಲ್ಲಿ ಕುಳಿತು ಟಿ.ವಿ. ವೀಕ್ಷಿಸಬಾರದು, ಏನನ್ನುತಿನ್ನಬಾರದು, ಬೇರೆ ಯಾವುದೇ ಪಠ್ಯೇತರ ವಿಷಯಗಳನ್ನು ಯೋಚಿಸುವುದಾಗಲಿ, ಓದುವುದಾಗಲಿ ಮಾಡಬಾರದು, ಮೊಬೈಲ್ ಬಳಸಬಾರದು ಇತ್ಯಾದಿಗಳು. ಹೀಗೆ ನಮ್ಮದೆ ಆದ ಒಂದು ಅಧ್ಯಯನಕ್ಕಾಗಿ ಸ್ಥಳವನ್ನು ಕಾಯ್ದಿರಿಸಿಕೊಳ್ಳುವುದರಿಂದ ಅಲ್ಲಿ ಒಂದು ಅಧ್ಯಯನ ಪರಿಸರ ನಿರ್ಮಾಣವಾಗುತ್ತದೆ. ಇದು ಹೇಗೆ ಸಾಧ್ಯ ಎನಿಸಬಹುದು.

ಉದಾಹರಣೆಗೆ, ನಾವು ಯಾವುದೇ ದೇವಸ್ಥಾನ, ಮಸೀದಿ, ಚರ್ಚ್, ಇತರೆ ಧಾರ್ಮಿಕ ಸ್ಥಳಗಳ ಬಳಿ ಹೋಗುತ್ತಿದ್ದಂತೆ ಅಥವಾ ಒಳಹೋದಾಗ ಒಂದು ರೀತಿಯ ಆಧ್ಯಾತ್ಮಿಕ ಭಾವನೆ ಮನದಲ್ಲಿ ಮೂಡುತ್ತದೆ. ಹಾಗೆಯೆ ಮತ್ತೊಂದು ಉದಾಹರಣೆಯೆಂದರೆ, ಮನೆಯಲ್ಲಿನ ಅಡುಗೆ ಮನೆಗೆ ಹೋದಾಗ ಅಲ್ಲಿ ಯಾವುದೇ ಆಹಾರವಾಗಲಿ, ಅಡುಗೆಯಾಗಲಿ ಇಲ್ಲದಿದ್ದರೂ ನಮ್ಮ ಮನದಲ್ಲಿ ವಿವಿಧ ತಿನಿಸುಗಳು ಸುಳಿಯುತ್ತವೆ. ಏಕೆಂದರೆ ಆ ಸ್ಥಳದಲ್ಲಿ ಆಹಾರ ಪದಾರ್ಥಗಳನ್ನು ತಯಾರು ಮಾಡುವುದಷ್ಟೇ ಬೇರೇನನ್ನು ಮಾಡುವುದಿಲ್ಲ. ಹಾಗೆಯೆ ನಾವು ಓದುವು ದಕ್ಕಾಗಿ ನಿಗದಿ ಪಡಿಸಿಕೊಂಡ ಸ್ಥಳದಲ್ಲಿಯೂ ಕೂಡ. ಯಾವ ಸ್ಥಳ ಸೂಕ್ತ? ಎಲ್ಲಿ ಹೆಚ್ಚಿನ ಶಬ್ದ ಮಾಲಿನ್ಯವಾಗಲಿ, ಇತರೆ ಅಡಚಣೆಗಳು ಇರುವುದಿಲ್ಲವೋ ಅಂತಹ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಿ. ಹಾಸಿಗೆ, ಮಂಚದ ಮೇಲೆ ಕುಳಿತು ಅಥವಾ ಮಲಗಿ ಅಧ್ಯಯನದಲ್ಲಿ ತೊಡಗಬೇಡಿ.

ಯಾವ ಸಮಯದಲ್ಲಿ ಓದಬೇಕು? ಬೆಳಿಗ್ಗೆ ಓದಬೇಕೆ? ರಾತ್ರಿಓದಬೇಕೆ, ಎಷ್ಟು ಸಮಯ ಓದಬೇಕು, ಎಂಬೆಲ್ಲಾ ಯೋಚನೆಗಳು ಬರುತ್ತವೆ ಅಲ್ಲವೆ. ಕೆಲವರಿಗೆ ಬೆಳಿಗ್ಗೆ ಬೇಗನೆ ಎದ್ದು ಅಧ್ಯಯನದಲ್ಲಿ ತೊಡಗಿದರೆ ಸರಳವಾಗಿ ಅರ್ಥವಾಗುವುದಲ್ಲದೆ ನೆನಪಿನಲ್ಲಿ ಇಟ್ಟುಕೊಳ್ಳಲು ಸಾಧ್ಯ, ಮತ್ತೆ ಕೆಲವರಿಗೆ ರಾತ್ರಿಯ ಸಮಯ ಓದಿದರೆ ಬಹಳ ಬೇಗ ಅರ್ಥವಾಗುವುದಲ್ಲದೆ ನೆನಪಿನಲ್ಲಿಟ್ಟುಕೊಳ್ಳುವುದು ಸುಲಭವಾಗುತ್ತದೆ. ಕೆಲವರು ಓದುವಾಗ ಶಾಂತ ವಾತಾವರಣ ಇರಬೇಕೆಂದು ಇಚ್ಚಿಸಿದರೆ, ಮತ್ತೆ ಕೆಲವರು ತಾವು ಓದುವಾಗ ಹಾಡು ಕೇಳುತ್ತಲೋ, ಟಿ.ವಿ. ನೋಡುತ್ತಲೋ ಓದುತ್ತಾರೆ. ಆದರೆ, ಮನೋವೈಜ್ಞಾನಿಕ ಅಧ್ಯಯನಗಳ ಪ್ರಕಾರ ನಾವು ಏಕ ಕಾಲದಲ್ಲಿ ನಮ್ಮ ಗಮನವನ್ನು ಪೂರ್ಣವಾಗಿ ಅಂದರೆ ನೂರಕ್ಕೆ ನೂರರಷ್ಟು ಎರಡು ಕೆಲಸಗಳ ಮೇಲೆ ಕೇಂದ್ರೀಕರಿಸುವುದು ಸಾಧ್ಯವಿಲ್ಲ. ಅದಕ್ಕಾಗಿಯೆ ವಾಹನ ಚಲಾಯಿಸುವಾಗ ಮೊಬೈಲ್ ಉಪಯೋಗಿಸುವುದು ಅಪರಾಧವೆಂದು ತಿಳಿಸಿರುವುದು. ಓದುವ ಸಮಯ ಹಾಗು ಕ್ರಮದ ಬಗ್ಗೆ ಯಾವುದೇ ಸಾರ್ವತ್ರಿಕ ಮಾರ್ಗದರ್ಶನವಿಲ್ಲ.

ನಿಮಗೆ ಯಾವ ಸಮಯ ಸೂಕ್ತ ಎಂದು ತಿಳಿದು ಅಧ್ಯಯನದಲ್ಲಿ ತೊಡಗಿಕೊಳ್ಳಿ. ಅನವಶ್ಯಕ ವಾಗಿ ನಿಮ್ಮ ಸ್ನೇಹಿತರ ಅಧ್ಯಯನ ಕ್ರಮದೊಡನೆ ಹೋಲಿಸಿಕೊಳ್ಳಬೇಡಿ. ನಿಮ್ಮದೇಯಾದ ಅಧ್ಯಯನ ವೇಳಾಪಟ್ಟಿಯನ್ನು, ಕ್ರಮವನ್ನು ಅನುಸರಿಸಿ. ಮುಖ್ಯವಾಗಿ, ಒಂದು ಸುಂದರ ಕಲಾಕೃತಿ, ನಿಮಗಿಷ್ಟವಾದ ಸಿನಿಮಾ ಅಥವಾ ನಾಟಕ ನೋಡುವಾಗ ಅಥವಾ ಕ್ರಿಕೆಟ್ ಮ್ಯಾಚ್ ನೋಡುವಾಗ ಉಂಟಾಗುವ ಹಿತಕರ ಮನಸ್ಥಿತಿಯಿಂದ ಅಂದರೆ, ಕಷ್ಟಪಟ್ಟುಓದದೆ, ಇಷ್ಟಪಟ್ಟು ಓದಿನಲ್ಲಿ ತೊಡಗಿಸಿಕೊಳ್ಳಬೇಕು. ಅದರಿಂದ ಅಧ್ಯಯನ ವಿಷಯವನ್ನುಗ್ರಹಿಸಲು, ಅರ್ಥ ಮಾಡಿಕೊಳ್ಳಲು, ಅರ್ಥಮಾಡಿಕೊಂಡಿದ್ದನ್ನು ನೆನಪಿನಲ್ಲಿಟ್ಟುಕೊಳ್ಳಲು ಸಾಧ್ಯವಾಗುತ್ತದೆ.

ಪ್ರೀತಿಯ ವಿದ್ಯಾರ್ಥಿಗಳೇ, ನಿಮಗೆ ನಿಜವಾಗಿಯೂ ಪರೀಕ್ಷೆ ಎಂದರೆ ಭಯವಿಲ್ಲ, ಬದಲಾಗಿ ಭಯವಿರುವುದು ಪರೀಕ್ಷೆಯಲ್ಲಿ ಕಡಿಮೆ ಅಂಕ ಬಂದರೆ ಎಂದು, ತಂದೆ-ತಾಯಿ, ಪೋಷಕರು ಉಪಧ್ಯಾಯರು ನಿಂದಿಸುತ್ತಾರೆಂದು ತನಗೆ ಅವಮಾನವಾಗುತ್ತದೆಂದು ಭಯ ಮನಸಿನಲ್ಲಿದ್ದರೆ ಏಕಾಗ್ರತೆಯಿಂದ ಓದಲು ಸಾಧ್ಯವಾಗುವುದಿಲ್ಲ.

ಎಲ್ಲರಲ್ಲಿಯೂ ಏಕಾಗ್ರತೆ ಶಕ್ತಿ ಇದ್ದೇ ಇರುತ್ತದೆ. ಆದರೆ ಇರುವ ಏಕಾಗ್ರತಾ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕಷ್ಟೇ. ಒಂದು ಚಿಮಣಿ ದೀಪ ಹೆಚ್ಚು ಪ್ರಕಾಶಮಾನವಾಗಿ ಉರಿಯಲು ಉತ್ತಮವಾದ ಎಣ್ಣೆ ಅಥವಾ ತೈಲ ಎಷ್ಟು ಮುಖ್ಯವೋ ಹಾಗೆಯೆ ನಮ್ಮ ದೇಹಕ್ಕೆ ಪೌಷ್ಟಿಕಾಂಶ ಪೂರಿತ ಆಹಾರದ ಅಗತ್ಯವಿದೆ. ದೇಹಕೃಶವಾದರೆ ಮಾನಸಿಕವಾಗಿ ಏಕಾಗ್ರತೆ ಸಾಧಿಸಲು ಕಷ್ಟ ವಾಗುತ್ತದೆ. ಆರೋಗ್ಯಕರ ದೇಹ ಏಕಾಗ್ರತೆ ಸಾಧಿಸಲು ಸಹಾಯಕಾರಿ. ಆದುದರಿಂದ ಪರೀಕ್ಷಾ ಸಮಯದಲ್ಲಿ ಊಟ, ನಿದ್ದೆ, ಬಿಟ್ಟು ಓದುವುದರಿಂದ ಹೆಚ್ಚು ಏಕಾಗ್ರತೆ ಸಾಧಿಸಲು ಕಷ್ಟಕರವಾಗು ತ್ತದೆ. ಆದುದರಿಂದ ಆರೋಗ್ಯದ ಮೇಲೆಯು ಹೆಚ್ಚಿನ ಗಮನ ಕೊಡಬೇಕಾಗುತ್ತದೆ. ಎಣ್ಣೆ ಪದಾರ್ಥಗಳನ್ನು, ಜಂಕ್ ಫುಡ್‌ಗಳನ್ನು ಈ ಸಮಯದಲ್ಲಿ ಸೇವಿಸದಿರುವುದು ಒಳ್ಳೆಯದು. ನಂತರ ದೀಪ ಆರಿಹೋಗದ ಹಾಗೆ ಅದರ ಸುತ್ತ ಒಂದು ಗಾಜಿನ ಕೊಳಬೆಯನ್ನು ಹಾಕಿರುತ್ತಾರೆ. ಅದರಂತೆ, ನಮ್ಮ ಗಮನವು ಬೇರೆ ಕಡೆಗೆ ಹೋಗದ ಹಾಗೆ ನಮ್ಮ ಮನಸ್ಸಿಗೆ ಯೋಚನೆಗಳು ಬರದಂತೆ ತಡೆಯಬೇಕು. ನಂತರ ಉರಿಯುತ್ತಿರುವ ದೀಪವು ಕೆಲವೊಮ್ಮೆ ಹೆಚ್ಚು ಪ್ರಕಾಶಮಾನವಾಗಿರುವುದಿಲ್ಲ, ಏಕೆಂದರೆ ಗಾಜಿನ ಕೊಳಬೆಯ ಮೇಲೆ ಮಸಿ ಇರುತ್ತದೆ. ಅದನ್ನು ಸ್ವಚ್ಚಗೊಳಿಸಿದರೆ ಬೆಳಕು ಹೆಚ್ಚು ಪ್ರಕಾಶಮಾನವಾಗಿರುತ್ತದೆ. ಹಾಗೆಯೆ ನಮ್ಮ ಮನಸ್ಸಿನಲ್ಲಿನ ಕಲ್ಮಶಗಳನ್ನು, ಋಣಾತ್ಮಕ ಚಿಂತನೆಗಳನ್ನು ತೆಗೆದು ಹಾಕಿ ಮನಸ್ಸನ್ನು ಸ್ವಚ್ಚವಾಗಿಟ್ಟುಕೊಂಡುಓದಿದರೆ ಏಕಾಗ್ರತೆಯನ್ನು ಹೆಚ್ಚಿಸಿಕೊಳ್ಳಲು ಸಹಾಯವಾಗುತ್ತದೆ.

ಪ್ರೀತಿಯ ವಿದ್ಯಾರ್ಥಿಗಳೆ, ಏಕಾಗ್ರತೆಯನ್ನು ಸಾಧಿಸಿದ ನಂತರ ಸ್ಮೃತಿತಂತ್ರ (ನಿಮೋನಿಕ್ಸ್)ಗಳ ಮೂಲಕ ನೆನಪಿನ ಶಕ್ತಿಯನ್ನುಹೆಚ್ಚಿಸಿಕೊಳ್ಳುವುದು ಹೇಗೆ ಎಂದು ತಿಳಿದುಕೊಳ್ಳೋಣ. ಗ್ರೀಕ್ ಭಾಷೆಯಲ್ಲಿ ನಿಮೊನಿಕ್ಸ್ ಎಂದರೆ ಸ್ಮೃತಿ ತಂತ್ರಗಳು ಎಂದರ್ಥ. ಇವು ನೆನಪಿನ ಶಕ್ತಿ ಯನ್ನು ಹೆಚ್ಚಿಸಿಕೊಳ್ಳಲು ಅನುಕೂಲಕರವಾಗಿವೆ. ಪ್ರಾಸಬದ್ಧ ಕಲಿಕೆ, ರೈಮಿಂಗ್ ವರ್ಡ್ಸ್‌ಗಳು ನೆನಪಿನಲ್ಲಿ ಉಳಿಯುತ್ತವೆ. ಉದಾಹರಣೆಗೆ ಏಪ್ರಿಲ್, ಜೂನ್, ಸೆಪ್ಟಂಬರ್, ನವಂಬರ್ ತಿಂಗಳುಗಳು 30 ದಿನಗಳನ್ನು ಒಳಗೊಂಡಿವೆ. ಫೆಬ್ರವರಿ ಹೊರತಾಗಿ ಉಳಿದ ತಿಂಗಳುಗಳು 31 ದಿನಗಳನ್ನು ಹೊಂದಿವೆ. ಹಾಗೆಯೇ ನಾವು ಅಧ್ಯಯನ ಮಾಡುತ್ತಿರುವ ವಿಷಯದ ಪರಿಕಲ್ಪನೆಯನ್ನು ಮನಸ್ಸಿನಲ್ಲಿಚಿತ್ರಿಸಿಕೊಳ್ಳುವುದು, ಒಂದು ಕಾಗದದ ಮೇಲೆ ಪರಿಕಲ್ಪನೆಯ ಚಿತ್ರ ಬಿಡಿಸುವುದು, ಇತ್ಯಾದಿಗಳ ಮೂಲಕ ನೆನಪಿನ ಶಕ್ತಿಯನ್ನು ಹೆಚ್ಚಿಸಿಕೊಳ್ಳಬಹುದು.

ವಿಷಯಗಳನ್ನು ವ್ಯವಸ್ಥಿತಗೊಳಿಸುವುದು ಅಥವಾ ಸಂಕ್ಷಿಪ್ತಗೊಳಿಸುವುದರ ಮೂಲಕ ಅಂದರೆ, ಉದ್ದವಾದ ಮಾಹಿತಿಯನ್ನುಚಿಕ್ಕ, ಚಿಕ್ಕ ಅರ್ಥಪೂರ್ಣವಾದ ವಿಷಯಗಳಾಗಿ ಪರಿವರ್ತಿಸಿಕೊಳ್ಳುವುದು, ಅದರಿಂದ ಚಿಕ್ಕರೂಪದ ವಿಷಯಗಳನ್ನು ನೋಡಿದಾಗ ಪೂರ್ಣ ಮಾಹಿತಿ ನೆನಪಿಗ ಬರುತ್ತದೆ. ಉದಾಹರಣೆಗೆ U FN , RBN, B E ಇತ್ಯಾದಿ.

ಹೊಸದಾಗಿ ಕಲಿತ ವಿಷಯವನ್ನು ನೆನಪು ಮಾಡಿಕೊಳ್ಳುವಾಗ ಕೆಲವು ಸುಳಿವು (ಕ್ಲೂ)ಗಳ ಜೊತೆ ಜೋಡಿಸಿದರೆ ನೆನಪು ಮಾಡಿಕೊಳ್ಳುವುದು ಸುಲಭವಾಗುತ್ತದೆ. ಉದಾಹರಣೆಗೆ, ಸರೀ ಸೃಪಗಳು(ರೆಪ್ಟೈಲ್ಸ್) ಮತ್ತು ಸಸ್ತನಿಗಳ (ಮ್ಯಾಮಲ್ಸ್) ನಡುವೆ ಇರುವ ವ್ಯತ್ಯಾಸ ಗುರುತಿಸು ವಾಗ ಪ್ರಮುಖ ಸುಳಿವು ಎಂದರೆ ಸಸ್ತನಿಗಳು ತಮ್ಮ ಮರಿಗಳಿಗೆ ಹಾಲುಣಿಸುತ್ತವೆ. ಆದರೆ ಸರೀಸೃಪಗಳು ಹಾಲುಣಿಸುವುದಿಲ್ಲ. ಈ ರೀತಿಯ ಮುಖ್ಯವೆನಿಸುವ ಸುಳಿವುಗಳು ವಿಸ್ತಾರವಾದ ವಿವರಣೆಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಸಹಾಯ ಮಾಡುತ್ತವೆ.

ಹಿಂದೆ ಕಲಿತಂತ ವಿಷಯಗಳನ್ನು ಪ್ರಸ್ತುತ ಕಲಿಯುತ್ತಿರುವ ವಿಷಯಗಳ ಜೊತೆ ಹೊಂದಿಸಿ ನೆನಪಿನಲ್ಲಿಟ್ಟುಕೊಳ್ಳುವುದರಿಂದ ಒಂದು ವಿಷಯವನ್ನು ನೆನಪು ಮಾಡಿಕೊಂಡರೆ ಮತ್ತೊಂದು ವಿಷಯವೂ ನೆನಪಿಗೆ ಬರುತ್ತದೆ.



ಕಲಿಯುವ ವಿಷಯ ಚಿಕ್ಕದಾಗಿದ್ದು ಸುಲಭವಾಗಿದ್ದರೆ, ಪದ್ಯದಂತೆ ನಾಲ್ಕು ಅಥವಾ ಐದು ಪ್ಯಾರ ಅಥವಾ ಸ್ಟಾಂಜಗಳಿದ್ದರೆ ಒಂದೇ ಬಾರಿಗೆ ಓದಿ ಅರ್ಥೈಸಿಕೊಳ್ಳಬೇಕು. ಕಲಿಯುವ ವಿಷಯವು ತುಂಬಾ ಉದ್ದವಿದ್ದು, ಕಷ್ಟಕರವಾಗಿದ್ದರೆ ಮಧ್ಯೆ ಮಧ್ಯೆ ವಿರಾಮ ತೆಗೆದುಕೊಂಡು ಓದಿದರೆ ಚೆನ್ನಾಗಿ ಮನ ಮುಟ್ಟುತ್ತದೆ. ಓದುವುದರ ಮಧ್ಯೆ ವಿರಾಮ ತೆಗೆದುಕೊಳ್ಳುವುದರಿಂದ ಆಯಾಸವಾಗಲಿ ಬೇಸರವಾಗಲಿ ಆಗುವುದಿಲ್ಲ.

ಕಲಿಯುವ ವಿಷಯ ಆಸಕ್ತಿಯುತವಾಗಿದ್ದರೆ ಅದನ್ನು ಪ್ರಾರಂಭದಿಂದ ಅಂತ್ಯದವರೆಗೂ ಸಂಪೂರ್ಣವಾಗಿ ಓದಿ ಅರ್ಥಮಾಡಿಕೊಳ್ಳುವುದು ಒಳ್ಳೆಯದು. ಆದರೆ ಅಧ್ಯಯನದ ವಿಷಯ ಕಷ್ಟಕರವಾಗಿದ್ದರೆ ನಮ್ಮ ಅನುಕೂಲಕ್ಕೆ ತಕ್ಕಂತೆ ಚಿಕ್ಕಚಿಕ್ಕ ಭಾಗಗಳಾಗಿ ವಿಂಗಡಿಸಿ ಒಂದೊಂದು ಭಾಗವನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ಕಲಿಯುವುದು ಒಳ್ಳೆಯದು.

ಕಠಿಣವೆನಿಸುವ ವಿಷಯವನ್ನು ಪದೇ ಪದೇ ಬರೆದು ಕಲಿಯಬೇಕಾಗುತ್ತದೆ. ಅದರಿಂದ ಕಲಿತ ವಿಷಯ ಚೆನ್ನಾಗಿ ನೆನಪಿನಲ್ಲಿಟ್ಟುಕೊಳ್ಳಲು ಸಹಾಯಕವಾಗುತ್ತದೆ. ಹಾಗೆಯೆ ಕೆಲವು ವಿಷಯಗಳನ್ನು ಆಗಾಗ್ಗೆ ನೆನಪು ಮಾಡಿಕೊಳ್ಳುತ್ತಿರಬೇಕು. ಅದಕ್ಕಾಗಿ ಸ್ನೇಹಿತರೊಡನೆ ಚರ್ಚಿಸು ವುದು, ವಿವರಿಸುವುದು, ಗುಂಪು ಅಧ್ಯಯನ ಸಹಕಾರಿಯಾಗಿರುತ್ತದೆ.

**ಹೇಗೆ ಮತ್ತು ಏಕೆ ಮರೆಯುತ್ತೇವೆ?**

ಕಲಿತ ವಿಷಯವನ್ನು ಬಹಳ ದಿನಗಳ ಕಾಲ ಮತ್ತೆ ನೆನಪಿಸಿಕೊಳ್ಳದಿದ್ದರೆ ಕ್ರಮೇಣ ಮರೆತು ಹೋಗುತ್ತೇವೆ. ಕಲಿಯುವ ವಸ್ತು ವಿಷಯ ಅರ್ಥಹೀನವಾಗಿದ್ದರೆ, ನೀರಸವಾಗಿದ್ದರೆ ಮರೆತು ಹೋಗುತ್ತದೆ. ಕಲಿಯುವ ವಿಷಯ ಕ್ರಮಬದ್ಧವಾಗಿರದಿದ್ದರೆ, ಕಲಿಯುವ ಸಮಯದಲ್ಲಿ ಏಕಾಗ್ರತೆ ಇರದಿದ್ದರೆ, ಕಲಿಯಲು ಆಸಕ್ತಿ ಇರದಿದ್ದರೆ ಹಾಗು ಕಲಿಯಲು ಪೂರ್ವಸಿದ್ಧತೆ ಇರದಿದ್ದರೆ ಮರೆವು ಉಂಟಾಗುತ್ತದೆ. ಮನಸ್ಸು ಉದ್ರೇಕಕ್ಕೆ ಅಂದರೆ ಕೋಪ, ಭಯ, ದುಃಖ ಇತ್ಯಾದಿಗಳಿಗೆ ಒಳಗಾಗಿದ್ದಾಗ ಕಲಿತರೆ ಮಾನಸಿಕ ಚಟುವಟಿಕೆಗಳಲ್ಲಿ ಏರುಪೇರಾಗಿ ಮರೆವು ಉಂಟಾಗುತ್ತದೆ. ನಿಮಗೆಲ್ಲರಿಗೂ ಹಿಂದಿನ ಪರೀಕ್ಷಾ ಸಮಯದಲ್ಲಿ ಒಂದು ಅನುಭವ ವಾಗಿರುತ್ತದೆ. ಅದೆಂದರೆ, ಪರೀಕ್ಷೆಯಲ್ಲಿ ಯಾವುದೋ ಒಂದು ವಿಷಯದ ಪ್ರಶ್ನೆಗೆ ಉತ್ತರಿಸುವಾಗ ಮತ್ತೊಂದು ವಿಷಯದ ಉತ್ತರ ನಮ್ಮ ಮನಸಿಗೆ ಬಂದು ಗೊಂದಲವನ್ನುಂಟು ಮಾಡುತ್ತದೆ. ಒಂದು ಪ್ರಶ್ನೆಗೆ ಉತ್ತರವನ್ನುಯೋಚಿಸುವಾಗ ಮತ್ತೊಂದು ಉತ್ತರ ನಮ್ಮ ಮನಸ್ಸಿನಲ್ಲಿ ಸುಳಿಯುತ್ತದೆ. ಏಕೆ ಹೀಗಾಗುತ್ತದೆ? ಏಕೆಂದರೆ, ನಾವು ಒಂದು ವಿಷಯವನ್ನುಅಧ್ಯಯನ ಮಾಡುವಾಗ ಮತ್ತೊಂದು ವಿಷಯವನ್ನು ಯೋಚಿಸುತ್ತಿರುತ್ತೇವೆ. ಆದುದರಿಂದ ಯಾವುದೇ ಅಧ್ಯಯನದ ವಿಷಯವನ್ನು ಕಲಿಯುವಾಗ ಮತ್ತೊಂದು ಅಧ್ಯಯನ ವಿಷಯವನ್ನಾಗಲಿ ಅಥವಾ ಬೇರೆನನ್ನಾದರೂ ಯೋಚಿಸದೆ ಕಲಿಯುವ ವಿಷಯವನ್ನು ಏಕಾಗ್ರತೆಯಿಂದ ಪೂರ್ಣ ಮನಸ್ಸಿನಿಂದ ಕಲಿಯಬೇಕು.

ಮತ್ತೊಂದು ಅನುಭವದ ಬಗ್ಗೆ ತಿಳಿಯೋಣ, ಪರೀಕ್ಷಾ ಕೊಠಡಿಯಲ್ಲಿ ಕುಳಿತು ಪ್ರಶ್ನೆಗಳಿಗೆ ಉತ್ತರಿಸುವಾಗ ಕೆಲವೊಮ್ಮೆ ಯಾವುದೋ ಒಂದು ದಿನಾಂಕ, ಪದ, ಚಿಕ್ಕ ವಾಕ್ಯ ನೆನಪಿಗೆ ಬರುವುದಿಲ್ಲ. ಎಷ್ಟೇ ಪ್ರಯತ್ನಿಸಿದರೂ ಆ ಒಂದು ಉತ್ತರ ನೆನಪಿಗೆ ಬರುವುದಿಲ್ಲ. ಕೊನೆಗೆ ಉತ್ತರ ಪತ್ರಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಕೊಟ್ಟು ಪರೀಕ್ಷಾ ಕೊಠಡಿಯಿಂದ ಹೊರಬಂದಾಗ, ತಕ್ಷಣ, ಕೆಲವೊಮ್ಮೆ ಸ್ವಲ್ಪ ಸಮಯದ ನಂತರ ತಟ್ಟನೆ ನೆನಪಿಗೆ ಬರುತ್ತದೆ. ಏಕೆ ಹೀಗಾಗುತ್ತದೆ? ಏಕೆಂದರೆ, ಪರೀಕ್ಷಾ ಕೊಠಡಿಯಲ್ಲಿ ಕುಳಿತಿರುವಷ್ಟು ಕಾಲ ನೀವು ಭಯ ಹಾಗು ಆತಂಕದಲ್ಲಿರುವಿರಿ. ಮನಸ್ಸಿನ ಮರ್ಮವೆಂದರೆ ಇಂತಹ ಸಮಯದಲ್ಲಿ ಕೆಲವು ಕಲಿತ ವಿಷಯಗಳು ನೆನಪಿಗೆ ಬರುವುದಿಲ್ಲ, ಆದರೆ ಪರೀಕ್ಷಾ ಕೊಠಡಿಯಿಂದ ಹೊರಬರುತ್ತಿದ್ದಂತೆ ನಿರಾಳವಾಗುತ್ತದೆ. ಮನಸ್ಸು ಸಮಾಧಾನ ಸ್ಥಿತಿಗೆ ಬರುವುದುರಿಂದ ಉತ್ತರ ತಟ್ಟನೆ ಹೊಳೆಯುತ್ತದೆ. ಮನೋ ವೈಜ್ಞಾನಿಕ ಅಧ್ಯಯನಗಳಿಂದ ತಿಳಿದು ಬರುವುದೇನೆಂದರೆ ವಿದ್ಯಾರ್ಥಿಗಳಿಗೆ ಸ್ವಲ್ಪ ಮಟ್ಟಿನ ಭಯ, ಆತಂಕ, ಉದ್ವೇಗವಿರಬೇಕು. ಪರೀಕ್ಷಾ ಭಯವಿಲ್ಲದಿದ್ದರೆ, ಪರೀಕ್ಷಾ ವಿಷಯದಲ್ಲಿ, ಬೇಜವಬ್ದಾರಿ, ನಿರ್ಲಕ್ಷತೆ, ಉದಾಸೀನತೆ ಕಾಣಿಸಿಕೊಳ್ಳುತ್ತದೆ. ಆದುದರಿಂದ ಸ್ವಲ್ಪ ಮಟ್ಟಿನ ಭಯ, ಆತಂಕ, ಪರೀಕ್ಷೆಗೆ ತಯಾರಾಗುವ ಸಮಯದಲ್ಲಿ ಇರಬೇಕು. ಇವು ವ್ಯಕ್ತಿಯ ಕಾರ್ಯ ದಕ್ಷತೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತವೆ. ಆದರೆ ಪರೀಕ್ಷಾ ಕೊಠಡಿಯಲ್ಲಿ ಯಾವುದೇ ಭಯ ಅಥವಾ ಆತಂಕಕ್ಕೆ ಒಳಗಾಗಬಾರದು.

- ಪ್ರಶಾಂತ್.ಎನ್.ಆರ್.,
ಆಪ್ತ ಸಲಹಾ ಮನಃಶಾಸ್ತ್ರಜ್ಞರು ಮೊ: 9481545719

## ಗ್ರಾಮೀಣ ಭಾಗದಲ್ಲಿ ಹಬ್ಬ ಹರಿದಿನಗಳ ಉಳಿವು



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಪುರಾತನ ಕಾಲದ ಹಬ್ಬ ಹರಿದಿನಗಳನ್ನು ಇಂದಿಗೂ ಆಚರಣೆಯೊಂದಿಗೆ ಉಳಿಸಿಕೊಂಡಿರುವುದು ವಿಶೇಷ ಸಂಗತಿ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಸಿ. ಮಂಜೇಗೌಡ ಅವರು ಹೇಳಿದರು.

ತಾಲ್ಲೂಕಿನ ಮಾದಲಗೆರೆ ಗ್ರಾಮದ ಶ್ರೀ ಮಹದೇಶ್ವರ ಸ್ವಾಮಿಯ 99ನೇ ಜಾತ್ರಾ ಮಹೋತ್ಸವದ ಪ್ರಯುಕ್ತ ಜರುಗಿದ ಎತ್ತಿನ ಬಂಡಿ ಉತ್ಸ ವದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಪೂರ್ವಜರು ಕಟ್ಟಿರುವ ನಮ್ಮ ನಾಡು-ನುಡಿ, ಸಂಸ್ಕೃತಿ ಹಾಗೂ ಸಂಸ್ಕಾರವನ್ನು ಉಳಿಸಿ ಬೆಳೆಸುವಲ್ಲಿ ಗ್ರಾಮೀಣ ಭಾಗದ ಜನತೆಯ ಪಾತ್ರ ಪ್ರಮುಖವಾಗಿದೆ. ಅದೆಷ್ಟೇ ಸಂಕಷ್ಟ ದಲ್ಲಿದ್ದರೂ ಸಂಸ್ಕೃತಿ ಹಾಗೂ ಸಂಸ್ಕಾರವನ್ನು ನಾವು ಮರೆಯುವುದಿಲ್ಲ ಎಂದರು.

ಫೆಬ್ರವರಿಯಿಂದ ಮೇ ತಿಂಗಳ ವರೆಗೂ ಗ್ರಾಮೀಣ ಭಾಗಗಳಲ್ಲಿ ಪ್ರತಿ ದಿನವೂ ಹಬ್ಬ ಆಚರಣೆ ಇರುತ್ತದೆ. ಜೂನ್ ತಿಂಗಳಿಂದ ಮಳೆ ಪ್ರಾರಂಭವಾಗಲಿದ್ದು ರೈತರು ಉಳುಮೆಯ ಮೂಲಕ ಬೀಜಗಳ ಬಿತ್ತನೆ ನೆಪ್ಪದಲ್ಲಿ ಸದಾಕಾಲ ಭೂಮಿ ತಾಯಿಯ ಪೂಜೆಯಲ್ಲಿ ತೊಡ ಗುತ್ತಾರೆ. ರೈತರಿಗೆ ಪ್ರತಿದಿನವೂ ಹಬ್ಬವೇ ಆಗಿರುತ್ತದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬಳಿಕ ಶ್ರೀ ಮಹದೇಶ್ವರ ಸ್ವಾಮಿಯ ಎತ್ತಿನ ಬಂಡಿ ಉತ್ಸವ ಮತ್ತು ಹುಲಿವಾಹನ ಸೇವೆ ಜರುಗಿತು. ಮಹಾ ಮಂಗಳಾರತಿ ನಂತರ ಅನ್ನ ದಾಸೋಹ ನಡೆಯಿತು. ಪ್ರಮುಖರಾದ ಎಂ.ಜೆ.ನಂಜೇಗೌಡ, ಹರೀಶ್, ದಿನೇಶ, ನಾಗರಾಜ್ ಇದ್ದರು.



**ಆಲೂರು: ಪಾಳ್ಯ ಹೋಬಳಿ ನೀಲನಹಳ್ಳಿ, ತಿಮ್ಮನಹಳ್ಳಿ, ಮಡಬಲು, ಕಾರ್ಜುವಳ್ಳಿ ಗ್ರಾಮಗಳ ಶ್ರೀ ಲಕ್ಷ್ಮಿದೇವಿ ಶಕುನ ರಂಗನಾಥಸ್ವಾಮಿ ಮತ್ತು ದಳವಾಹಿ ಕೆಂಚರಾಯ ಸ್ವಾಮಿಯವರ 11ನೇ ಜಾತ್ರಾ ಮಹೋತ್ಸವದಲ್ಲಿ ಶಾಸಕ ಸಿಮೆಂಟ್ ಮಂಜು ಅವರನ್ನು ದೇವಸ್ಥಾನ ಆಡಳಿತ ಮಂಡಲಿಯಿಂದ ಸನ್ಮಾನಿಸಲಾಯಿತು.**




**ಹೊಳೆನರಸೀಪುರದಲ್ಲಿ ಪುರಸಭೆವತಿಯಿಂದ ಹಮ್ಮಿಕೊಂಡಿದ್ದ ಸ್ವಚ್ಛ ಭಾರತ್ ಮಿಷನ್ (2.0) ಯೋಜನೆಯಡಿ ಜಾಗೃತಿ ಅಭಿಯಾನದಲ್ಲಿ ಸಂಸದ ಶ್ರೇಯಸ್ ಪಟೇಲ್ ಅವರು ಭಾಗವಹಿಸಿ ದ್ದರು. ರ‍್ಯಾಲಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಹಾಗು ನೈರ್ಮಲ್ಯದ ಬಗ್ಗೆ ಮಾಹಿತಿ ನೀಡಲಾಯಿತು.**

## ಬಾಣಾವರ ಗ್ರಾ.ಪಂ ಅಧ್ಯಕ್ಷರಾಗಿ ಸಂಜಯ್



• ಪ್ರಜೋದಯ ವರದಿ

**ಬಾಣಾವರ:** ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಬಿ.ಹೆಚ್.ಸಂಜಯ್ ಅವರು ಗೆಲುವು ಸಾಧಿಸಿದ್ದಾರೆ.

ಈ ಹಿಂದೆ ಅಧ್ಯಕ್ಷೆಯಾಗಿದ್ದ ಕೆ.ಎನ್.ವೀಣಾ ವಿಶ್ವನಾಥ್ ಅವರು ರಾಜೀನಾಮೆ ನೀಡಿದ ಹಿನ್ನಲೆ ಚುನಾವಣೆ ಪ್ರಕ್ರಿಯೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ಸೈಯದ್ ಆಸಿಫ್ ಹಾಗು ಬಿ.ಹೆಚ್.ಸಂಜಯ್ ಅವರು ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ಸೈಯದ್ ಆಸಿಫ್ 10 ಮತಗಳನ್ನು ಪಡೆದರೆ, ಬಿ.ಹೆಚ್.ಸಂಜಯ್ ಅವರು 12 ಮತಗಳನ್ನು ಪಡೆದು ಜಯಶೀಲರಾದರು ಎಂದು ಚುನಾವಣಾ ಅಧಿಕಾರಿಯಾಗಿ ಆಗಮಿಸಿದ್ದ ತಹಶೀಲ್ದಾರ್ ಸಂತೋಷ್ ಕುಮಾರ್ ಅವರು ಘೋಷಿಸಿದರು. ನೂತನ ಅಧ್ಯಕ್ಷರಾದ ಬಿ.ಹೆಚ್.ಸಂಜಯ್ ಅವರಿಗೆ ಗ್ರಾಮ ಪಂಚಾಯಿತಿ ಸದಸ್ಯರು ಅಭಿನಂದನೆ ಸಲ್ಲಿಸಿದರು.

## ಶ್ರೀಲಂಕಾ ಬ್ಯಾಟಿಂಗ್ ವೈಫಲ್ಯ: ಇಂಗ್ಲೆಂಡ್‌ಗೆ ಗೆಲುವು

• ಪ್ರಜೋದಯ ವರದಿ

**ಪಲೆಕೆಲೆ:** ಶ್ರೀಲಂಕಾ ವಿರುದ್ಧದ ಸೂಪರ್ 8 ಪಂದ್ಯದಲ್ಲಿ ಇಂಗ್ಲೆಂಡ್ ತಂಡವು 51 ರನ್‌ಗಳ ಸುಲಭ ಗೆಲುವು ದಾಖಲಿಸಿದೆ.

ಪಲೆಕೆಲೆ ಅಂತರರಾಷ್ಟ್ರೀಯ ಕ್ರಿಕೆಟ್ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ ತಂಡವು ಆರಂಭಿಕ ಬ್ಯಾಟರ್ ಫಿಲ್ ಸಾಲ್ಟ್ (62 ರನ್, 40 ಎಸೆತ) ಅವರ ಅರ್ಧಶತಕದ ನೆರವಿನಿಂದ 20 ಓವರ್‌ಗಳ ಅಂತ್ಯಕ್ಕೆ 9 ವಿಕೆಟ್ ನಷ್ಟಕ್ಕೆ 146 ರನ್ ಗಳಿಸಿತು.

ಶ್ರೀಲಂಕಾ ಪರ ದುನಿತ್ ವೆಲ್ಲಾಲಗೆ 3 ವಿಕೆಟ್ ಪಡೆದರೆ, ದಿಲ್ಶನ್ ಮಧುಶಂಕ ಹಾಗೂ ತೀಕ್ಷಣ ತಲಾ 2 ವಿಕೆಟ್ ಕಬಳಿಸಿದರು.

147 ರನ್ ಗುರಿ ಬೆನ್ನಟ್ಟಿದ ಶ್ರೀಲಂಕಾ ತಂಡವು ತವರು ಮೈದಾನದಲ್ಲಿ ರನ್ ಗಳಿಸಲು ಪರದಾಡಿತು. ನಾಯಕ ದಾಸುನ್ ಶನಕ (30 ರನ್, 24 ಎಸೆತ) ಬಿಟ್ಟರೆ, ಉಳಿದವರು ಪೆವಿಲಿಯನ್ ಪೆರೇಡ್ ನಡೆಸಿದರು.

ಇಂಗ್ಲೆಂಡ್ ಪರ ವಿಲ್ ಜಾಕ್ಸ್ 3 ವಿಕೆಟ್ ಕಿತ್ತರು. ಜೋಫ್ರಾ ಆರ್ಚರ್, ಲಿಯಾಮ್ ಡಾಸನ್ ಮತ್ತು ಆದಿಲ್ ರಶೀದ್ ತಲಾ 2 ವಿಕೆಟ್ ಕಬಳಿಸುವ ಮೂಲಕ ಲಂಕಾ ತಂಡವನ್ನು 16.4 ಓವರ್‌ಗಳಲ್ಲಿ 95 ರನ್‌ಗಳಿಗೆ ಆಲೌಟ್ ಮಾಡುವಲ್ಲಿ ಯಶಸ್ವಿಯಾಯಿತು.




## ತೋಟಿ ಏತ ನೀರಾವರಿ ಯೋಜನೆ ಅಡೆತಡೆ ದೂರ: ಬಾಲಕೃಷ್ಣ

• ಪ್ರಜೋದಯ ವರದಿ

**ನುಗ್ಗೇಹಳ್ಳಿ:** ನುಗ್ಗೇಹಳ್ಳಿ-ಹಿರೀಸಾವೆ ಹೋಬಳಿಯ 25ಕ್ಕೂ ಹೆಚ್ಚು ಕೆರೆಗಳನ್ನು ತುಂಬಿಸುವ ತೋಟಿ ಏತ ನೀರಾವರಿ ಯೋಜನೆಯ ಬಂಡಿಹಳ್ಳಿ ಬಳಿ ಸುಮಾರು 900 ಮೀಟರ್ ಪೈಪ್ ಲೈನ್ ಕಾಮಗಾರಿ ಸ್ಥಗಿತಗೊಂಡಿದ್ದ ಹಿನ್ನಲೆಯಲ್ಲಿ ಶನಿವಾರ ರೈತರು ಹಾಗು ರೈತ ಸಂಘದ ಮುಖಂಡರೊಂದಿಗೆ ನಡೆಸಿದ ಸಂಧಾನ ಸಭೆ ಯಶಸ್ವಿಯಾಗಿದೆ ಎಂದು ಶಾಸಕ ಸಿ. ಎನ್. ಬಾಲಕೃಷ್ಣ ಅವರು ಹೇಳಿದರು.

ರಾಜ್ಯ ರೈತ ಸಂಘದ ಅಧ್ಯಕ್ಷ ಅರಳಾಪುರ ಮಂಜೇಗೌಡ ಹಾಗು ಯೋಜನೆ ವ್ಯಾಪ್ತಿಯ ರೈತರೊಂದಿಗೆ ಸಭೆ ನಡೆಯಿತು. ಅರಳಾಪುರ ಮಂಜೇಗೌಡ ಅವರ ನಿವಾಸದಲ್ಲಿ ಸಭೆ ನಡೆಸಿದ ಶಾಸಕ ಸಿ.ಎನ್. ಬಾಲಕೃಷ್ಣ ಅವರು, ಸುಮಾರು 52 ಕೋಟಿ ರೂ. ವೆಚ್ಚದ ತೋಟಿ ಏತ ನೀರಾವರಿ ಯೋಜನೆ ಈಗಾಗಲೇ ಶೇ. 90ರಷ್ಟು ಕಾಮಗಾರಿ ಪೂರ್ಣ ಗೊಂಡಿದೆ. ಜೊತೆಗೆ ಭೂಸ್ವಾಧೀನ ಪ್ರಕ್ರಿಯೆಯು ಪೂರ್ಣಗೊಂಡಿದೆ. ಸದ್ಯದಲ್ಲೇ ಯೋಜನೆಗೆ ಭೂಮಿ ನೀಡಿರುವ ರೈತರಿಗೆ ಪರಿಹಾರ ದೊರ ಕಲಿದೆಯೆಂದರು. ಚನ್ನರಾಯಪಟ್ಟಣದ ಅಮಾನಿ ಕೆರೆಯಿಂದ ಪೈಪ್ ಲೈನ್ ಮೂಲಕ ನುಗ್ಗೇಹಳ್ಳಿ-ಹಿರೀಸಾವೆ ಹೋಬಳಿಗಳ ಸುಮಾರು 25ಕ್ಕೂ ಹೆಚ್ಚು ಕೆರೆಗಳು ಯೋಜನೆ ವ್ಯಾಪ್ತಿಗೆ ಬರಲಿವೆ. ಕಳೆದ ಅನೇಕ ದಿನಗಳಿಂದ ಅರಳಾಪುರ ರೈತರು 900 ಮೀಟರ್ ಪೈಪ್‌ಲೈನ್ ಕಾಮ ಗಾರಿಗೆ ಪರಿಹಾರದ ಹಿನ್ನಲೆಯಲ್ಲಿ ತಡೆ ಒಡ್ಡಿದ್ದರು. ಅದರಿಂದ ಕಾಮ ಗಾರಿಗೆ ಹಿನ್ನಡೆಯಾಗಿತ್ತು ಎಂದರು.



**ಮುಂಬರುವ ಹಂಗಾಮಿನಲ್ಲಿ ಯೋಜನೆಗೆ ಚಾಲನೆ**

ಜೂನ್-ಜುಲೈನಲ್ಲಿ ಪೂರ್ವ ಹಂಗಾಮಿನಲ್ಲಿ ಹೇಮಾವತಿ ನದಿಯಿಂದ ನಾಲೆಗಳಿಗೆ ನೀರು ಹರಿಸಿದರೆ ಮೊದಲ ಹಂತದಲ್ಲೇ ತೋಟಿ ಏತ ನೀರಾವರಿ ಯೋಜನೆ ವ್ಯಾಪ್ತಿಯ ಕೆರೆಗಳಿಗೆ ನೀರು ಹರಿಸುವ ಮೂಲಕ ಯೋಜನೆಗೆ ಚಾಲನೆ ನೀಡಲಾಗುತ್ತದೆ. ಕೊಟ್ಟ ಮಾತಿನಂತೆ ಯೋಜನೆ ಪೂರ್ಣಗೊಳಿಸಿ ಕೆರೆಗಳನ್ನು ತುಂಬಿಸಲಾಗುವುದೆಂದು ಭರವಸೆ ನೀಡಿದರು.

ರೈತ ಸಂಘದ ರಾಜ್ಯಾಧ್ಯಕ್ಷ ಅರಳಾಪುರ ಮಂಜೇಗೌಡ ಅವರು ಮಾತನಾಡಿ, ನಮಗೂ ರೈತರ ಮನಸ್ಥಿತಿ ಅರ್ಥವಾಗುತ್ತದೆ. ಈ ಭಾಗದಲ್ಲಿ ಬೈಪಾಸ್ ರಸ್ತೆ ಹೋಗಿರುವುದರಿಂದ ಜಮೀನಿಗೆ ಹೆಚ್ಚಿನ ಬೆಲೆ ಬಂದಿರುವುದರಿಂದ ಕೆಲ ರೈತರು ಹೆಚ್ಚಿನ ಪರಿಹಾರಕ್ಕಾಗಿ ಒತ್ತಾಯ ಮಾಡಿದ್ದರು. ಇದು ರೈತರ ಯೋಜನೆಯಾಗಿದ್ದು, ತಾಲ್ಲೂಕಿನ ರೈತರಿಗೆ ಹೆಚ್ಚಿನ ಅನುಕೂಲ ವಾಗುವುದರಿಂದ ಶಾಸಕರೊಂದಿಗೆ ನಡೆದ ಸಭೆಯಲ್ಲಿ ರೈತರ ಮನವೊಲಿಸಲಾಗಿದೆ. ಕಾಮಗಾರಿಗೆ ಯಾವ ತಡೆಯೊಡ್ಡದಂತೆ ತಿಳಿಸಲಾಗಿದೆ. ಶೀಘ್ರ ಪರಿಹಾರ ಕೊಡಿಸುವುದಾಗಿ ಶಾಸಕರು ತಿಳಿಸಿದ್ದಾರೆಂದರು.

ಹಿರಿಯ ಸಹಕಾರಿ ಧುರೀಣ ವಡ್ಡರಹಳ್ಳಿ ರಾಜಣ್ಣ, ಟಿಎಪಿಎಂಎಸ್ ನಿರ್ದೇಶಕ ತೋಟಿ ನಾಗರಾಜ್, ಮುಖಂಡರಾದ ವಾಸಣ್ಣ , ಹುಲಿಕೆರೆ ಸಂಪತ್ ಕುಮಾರ್ ಇತರರಿದ್ದರು.

## ಗ್ರಾಮೀಣ ಪ್ರತಿಭೆಗಳಿಂದ ಸಿನಿಮಾ ರಂಗ ಪ್ರಗತಿ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:**ಗ್ರಾಮೀಣ ಪ್ರತಿಭೆಗಳು ಇಂದಿನ ಸಿನಿಮಾ ಕ್ಷೇತ್ರದ ಪ್ರಮುಖನಟರಾಗಿರುವುದು ಹೆಮ್ಮೆಯ ಸಂಗತಿ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಅವರು ಹೇಳಿದರು.

ಪಟ್ಟಣದ ಆಂಜನೇಯ ಸ್ವಾಮಿ ದೇಗುಲದಲ್ಲಿ ಶಾರದ ಚೌಡೇನಹಳ್ಳಿ ಅವರು ನಿರ್ಮಿಸುತ್ತಿ ರುವ ಮಿನುಗು ಸಿನಿಮಾದ ಮುಹೂರ್ತ ಕಾರ್ಯಕ್ರಮದಲ್ಲಿ ಕ್ಲಾಪ್ಸ್ ಮಾಡಿ ಶುಭ ಹಾರೈಸಿ ಮಾತನಾಡಿದ ಅವರು, ಕೆಲವಾರು ವರ್ಷಗಳ ಹಿಂದೆ ಗ್ರಾಮೀಣ ಭಾಗದಲ್ಲಿ ಪೌರಾಣಿಕ ನಾಟಕಗಳು ತುಂಬಾ ಪ್ರಸಿದ್ಧಿ ಹೊಂದಿದ್ದವು. ಒಬ್ಬರಿಗಿಂತ ಒಬ್ಬರು ಪಾತ್ರಧಾರಿಗಳು ಉತ್ತಮ ಎಂಬಂತೆ ಪ್ರದರ್ಶನ ನೀಡುತ್ತಿದ್ದು ಸೈ ಎನಿಸುವಂತೆ ಇರುತಿತ್ತು. ಅಂತಹ ಬಹುತೇಕ ಪ್ರತಿಭೆಗಳು ಸಿನಿಮಾ ರಂಗಕ್ಕೆ ಪಾದರ್ಪಣೆ ಮಾಡಿ ಯಶಸ್ಸು ಕಂಡಿರುವುದು ಶ್ಲಾಘನೀಯ ಸಂಗತಿ ಎಂದು ಮೆಚ್ಚಿಗೆ ವ್ಯಕ್ತಪಡಿಸಿದರು.

ಅಭಿಮಾನಿಗಳ ದೇವರು ಎಂದೇ ಖ್ಯಾತಿ ಪಡೆದಿದ್ದ ಕನ್ನಡದ ನೆಚ್ಚಿನ ಮೇರು ನಟ ಡಾ.ರಾಜಕುಮಾರ್ ಅಣ್ಣನವರು, ದೊಡ್ಡಣ್ಣ, ರೆಬೆಲ್ ಸ್ಟಾರ್ ಅಂಬರೀಶ್, ಉಮಾಶ್ರೀ ಅಮ್ಮ, ಶೃತಿ ಹಾಗೂ ಬಹುತೇಕ ನಟರು ಗ್ರಾಮೀಣ ಭಾಗದಿಂದಲೇ ಬಂದವರು. ಅವರ ಸಾಧನೆ ಹಾಗೂ ಹೆಸರು ನೂರಾರು ಕಾಲ ಚಿರವಾಗಿ ಉಳಿಯಲಿದೆಂದರು.

ಸಂಗೀತ ನಿರ್ದೇಶಕವಿ.ಮನೋಹರ್ ಮಾತನಾಡಿ, ಶಾರದ ಚೌಡೇನಹಳ್ಳಿ ಅವರು ನಿರ್ಮಾಣ ಮಾಡುತ್ತಿರುವ ಮಿನುಗು ಚಿತ್ರಕ್ಕೆ ಬಿ.ಶಿವಾನಂದ ಅವರು ಕಥೆ ಹಾಗೂ ಸಂಭಾಷಣೆ ಬರೆದಿದ್ದು, ರಾಜೇಶ್ ಕೆಂಚನಹಳ್ಳಿ ಅವರು ನಿರ್ದೇಶನ ಮಾಡಲಿದ್ದಾರೆಂದು ತಿಳಿಸಿದರು.

ಚಿತ್ರತಂಡವು ಶ್ರೀ ಆಂಜನೇಯ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿತು. ಕತ್ತರಿಘಟ್ಟದ ಶ್ರೀ ಮೆಳಿಯಮ್ಮ ಆಧ್ಯಾತ್ಮಿಕ ಕೇಂದ್ರದ ಶ್ರೀ ಚಂದ್ರಶೇಖರ ಗುರೂಜಿ ಚಿತ್ರತಂಡಕ್ಕೆ ಆಶೀರ್ವದಿಸಿದರು. ಭೂಮಿ ಕ್ಷೇಮಾಭಿವೃದ್ಧಿ ಸಂಘದ ಮಾಜಿ ಅಧ್ಯಕ್ಷ ರಾಜ ಕುಮಾರ್, ಉದ್ಯಮಿ ಅಣತಿ ಯೋಗೇಶ್, ಚಿತ್ರತಂಡ ಹಾಗೂ ಇತರರು ಇದ್ದರು.

### ಶ್ರೀಮತಿ ಎಲ್.ವಿ. ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಮಿಯಾವಾಕಿ ಮಾದರಿ ಅರಣ್ಯ ನಿರ್ಮಾಣ

## ಪರಿಸರ ರಕ್ಷಣೆಗೆ ತಾಂತ್ರಿಕ ಶಿಕ್ಷಣದ ಗಟ್ಟಿ ಕೊಡುಗೆ

• ಪ್ರಜೋದಯ ವರದಿ

**ಹಾಸನ:** ಪರಿಸರ ಸಂರಕ್ಷಣೆ ಎಂದರೆ ಕೇವಲ ಸುಂದರ ಪದಪುಂಜಗಳ ವರ್ಣನೆಯಲ್ಲ ಅಥವಾ ದಿನಾಚರಣೆಯ ಸಂಮೋಹನ ಭಾಷಣವೂ ಅಲ್ಲ. ಇದು ಮಾತಿಗಿಂತ ಕೃತಿಯಲ್ಲಿ ತೋರಬೇಕಾದ ಮಹತ್ಕಾರ್ಯ. ಎಲ್.ವಿ.ಪಾಲಿಟೆಕ್ನಿಕ್ ಈ ನಿಟ್ಟಿನಲ್ಲಿ ಮಾದರಿಯಾಗಿ ರೂಪುಗೊಂಡಿದೆ ಎಂದು ಭಾರತ ಜ್ಞಾನ ವಿಜ್ಞಾನ ಸಮಿತಿ ತಾಲ್ಲೂಕು ಅಧ್ಯಕ್ಷ ಡಾ.ಎಚ್.ಜಿ. ಮಂಜುನಾಥ್ ಅವರು ತಿಳಿಸಿದರು.

ನಗರದ ಶ್ರೀಮತಿ ಎಲ್.ವಿ. ಸರ್ಕಾರಿ ಪಾಲಿಟೆಕ್ನಿಕ್ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಬದುಕು ಮತ್ತು ಪರಿಸರ ನಮ್ಮ ಹಕ್ಕು, ನಮ್ಮ ಕರ್ತವ್ಯ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಳೆದ 5-6 ತಿಂಗಳುಗಳಿಂದ ಎಲ್.ವಿ.ಪಾಲಿಟೆಕ್ನಿಕ್ ಆವರಣದಲ್ಲಿ ಬಿಜಿವಿಎಸ್ ಸಹಯೋಗದೊಂದಿಗೆ ಹಣ್ಣಿನ ವನ ಹಾಗೂ ಜಪಾನಿ ಮೂಲದ ಮಿಯಾವಾಕಿ ಮಾದರಿ ಅರಣ್ಯವನ್ನು ನಿರ್ಮಿಸಲಾಗಿದೆ.




ಅದಕ್ಕೆಹನಿ ನೀರಾವರಿ ವ್ಯವಸ್ಥೆಯನ್ನೂ ಕಲ್ಪಿಸಲಾ ಗಿದೆ. ಇನ್ನೆರಡು ವರ್ಷಗಳಲ್ಲಿ ಈ ಪುಟ್ಟ ಕಾಡು ನಗರದ ಮಧ್ಯಭಾಗದಲ್ಲಿ ಪರಿಸರಾಧ್ಯಯನದ ಜೀವಂತ ಮಾದರಿಯಾಗಿ ಹೊರಹೊಮ್ಮಲಿದೆ. ಇದು ಸುತ್ತಮುತ್ತಲಿನ 5-6 ಕಿಲೋ ಮೀಟರ್ ವ್ಯಾಪ್ತಿಯ ಜನರಿಗೆ ಶುದ್ಧ ಆಮ್ಲಜನಕ ಪೂರೈಸುವ ಹಸಿರು ಉಗ್ರಾಣವಾಗಲಿದೆ. ಪರಿಸರ ಸಂರಕ್ಷಣೆ ನಿರಂತರ ಚಟುವಟಿಕೆಯಾಗಲು ಕಾಲೇಜಿನಲ್ಲಿ ತಕ್ಷಣವೇ ಇಕೋ ಕ್ಲಬ್ ಸ್ಥಾಪಿಸಬೇಕೆಂದರು.

ಜಿಲ್ಲಾ ಸಮಿತಿ ಸದಸ್ಯ ಅಹಮದ್ ಹಗರೆ ಅವರು ಪಿಪಿಟಿ ಮೂಲಕ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ಪರಿಸರದ ಗಂಭೀರ ಸ್ಥಿತಿಯ ಬಗ್ಗೆ ಬೆಳಕು ಚೆಲ್ಲಿದರು. ಸಂವಿಧಾನದ ಕಲಂ 51 ರಡಿ ಪರಿಸರ ರಕ್ಷಣೆ ಮತ್ತು ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳುವುದು ಪ್ರತಿ ಯೊಬ್ಬನ ಕರ್ತವ್ಯ ಎಂದು ಅವರು ನೆನಪಿಸಿದರು. ನಮ್ಮ ದೇಶದಲ್ಲಿ ಅರಣ್ಯದ ಪ್ರಮಾಣ ಕೇವಲ ಶೇ.21-24ರಷ್ಟಿದ್ದು, ರಾಷ್ಟ್ರೀಯ ಅರಣ್ಯ ನೀತಿಯಂತೆ ಅದು ಕನಿಷ್ಠ ಶೇ.33 ಇರಬೇಕೆಂದು ಅಂಕಿ-ಅಂಶಗಳ ಸಮೇತ ವಿವರಿಸಿದರು. ಜಾಗತಿಕ ತಾಪಮಾನ ಏರಿಕೆ, ನೀರಿನ ಬಡತನ ಹಾಗೂ ಪ್ಲಾಸ್ಟಿಕ್ ಮಾಲಿನ್ಯದ ಬಗ್ಗೆ ಜಾಗೃತಿ ಮೂಡಿಸಿದ ಅವರು, ತ್ಯಾಜ್ಯ ನಿರ್ವಹಣೆಗೆ 3 ಸೂತ್ರವೇ ವೈಜ್ಞಾನಿಕ ಪರಿಹಾರ ಎಂದರು.


ಪ್ರಾಂಶುಪಾಲ ವಿ.ಜೆ.ಜಾಯ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಂಜುನಾಥ್ ಅವರ ಸೇವಾಮನೋಭಾವದಿಂದಾಗಿ ಕಾಲೇಜು ಆವರಣದಲ್ಲಿ ಪರಿಸರ ಪ್ರಜ್ಞೆ ಮೂಡಿಸಲು ಸಾಧ್ಯವಾಗಿದೆ. ಇಲಾಖೆ ಹಾಗೂ ಸರ್ಕಾರಕ್ಕೆ ತಾಂತ್ರಿಕ ಶಿಕ್ಷಣ ಸಂಸ್ಥೆಯು ನೀಡುತ್ತಿರುವ ಪರಿಸರ ಪೂರಕ ಕೊಡುಗೆ ಇದಾಗಿದೆ ಎಂದು ಶ್ಲಾಘಿಸಿದರು.

**ವಿದ್ಯಾರ್ಥಿಗಳ ಪರಿಸರ ಪ್ರತಿಜ್ಞೆ:** ಸಂವಾದದ ನಂತರ ಕಾಲೇಜಿನ ನೂರಾರು ವಿದ್ಯಾರ್ಥಿಗಳು ಮಿಯಾವಾಕಿ ಅರಣ್ಯಕ್ಕೆ ಭೇಟಿ ನೀಡಿ, ಗಿಡಗಳಿಗೆ ನೀರುಣಿಸಿದರು. ವರ್ಷಕ್ಕೆ ಕನಿಷ್ಠ 2 ಮರಗಳನ್ನು ನೆಟ್ಟು ಪೋಷಿಸುವುದು. ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡು ವುದು ಮತ್ತು ನೀರಿನ ಮಿತ ಬಳಕೆ ಮಾಡುವುದು. ವೈಜ್ಞಾನಿಕ ಮನೋಭಾವ ಬೆಳೆಸಿ ಕೊಳ್ಳುವುದು ಹಾಗೂ ಮಹಿಳೆಯರ ಗೌರವ ಕಾಪಾಡುವುದು. ಎಂಬ ಅಂಶಗಳನ್ನೊಳಗೊಂಡ ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಿದರು.

# ಸಾರ್ಥಕ ಸಾವಿರ ದಿನಗಳು




# ಸಾಕಾರಗೊಂಡಿವೆ ಕೋಟಿ ಕನಸುಗಳು



“ವರ್ತಮಾನದಲ್ಲಿ ನಾವು ಏನು ಕೆಲಸಗಳನ್ನು ಮಾಡುತ್ತೇವೆಯೋ, ಅದರ ಮೇಲೆ ಭವಿಷ್ಯ ನಿರ್ಧಾರವಾಗುತ್ತದೆ.”

— ಮಹಾತ್ಮ ಗಾಂಧೀಜಿ

ಮಹಾತ್ಮ ಗಾಂಧೀಜಿಯವರ **'ಅಂತ್ಯೋದಯ'** ಮತ್ತು **'ಸರ್ವೋದಯ'** ತತ್ವದ ಅಡಿಯಲ್ಲಿ,
ಸನ್ಮಾನ್ಯ ಮುಖ್ಯಮಂತ್ರಿಗಳಾದ **ಶ್ರೀ ಸಿದ್ದರಾಮಯ್ಯ** ಮತ್ತು
ಮಾನ್ಯ ಉಪ ಮುಖ್ಯಮಂತ್ರಿಗಳಾದ **ಶ್ರೀ ಡಿ ಕೆ ಶಿವಕುಮಾರ್** ಅವರ
ನಾಯಕತ್ವದ ಕರ್ನಾಟಕ ಸರ್ಕಾರ ಸಾರ್ಥಕ ಸಾವಿರ ದಿನಗಳನ್ನು ಪೂರೈಸಿದೆ.

## ಪ್ರಮುಖ ಮೈಲಿಗಲ್ಲುಗಳು

**₹1.16+ ಲಕ್ಷ ಕೋಟಿ**
ಪಂಚ ಗ್ಯಾರಂಟಿಗಳಿಗೆ ಈವರೆಗೆ ವಿನಿಯೋಗ

**2.11+ ಲಕ್ಷ**
ಕುಟುಂಬಗಳಿಗೆ ಹಕ್ಕುಪತ್ರ

**₹1.5 ಲಕ್ಷ ಕೋಟಿ**
ಬೆಂಗಳೂರು ಮೂಲಸೌಕರ್ಯಕ್ಕೆ ವೆಚ್ಚ

**₹1.12+ ಲಕ್ಷ ಕೋಟಿ**
ಸಾರ್ವಜನಿಕ ಕಲ್ಯಾಣ ಯೋಜನೆಗಳಿಗೆ ಮೀಸಲು (ವಾರ್ಷಿಕ)

**1.37+ ಕೋಟಿ**
ಕುಟುಂಬಗಳು ಸರ್ಕಾರದ ಯೋಜನೆಗಳ ನೇರ ಫಲಾನುಭವಿಗಳು



ಕರ್ನಾಟಕದ ನವ ನಿರ್ಮಾಣಕ್ಕೆ
**ಗ್ಯಾರಂಟಿ ಸರ್ಕಾರ**

**ಪ್ರಗತಿಯ ಹಾದಿ
ಇದು ಕರ್ನಾಟಕ ಅಭಿವೃದ್ಧಿ ಮಾದರಿ**

ಶಕ್ತಿ ಅನ್ನಭಾಗ್ಯ ಗೃಹ ಜ್ಯೋತಿ ಗೃಹಲಕ್ಷ್ಮಿ ಯುವನಿಧಿ

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗ/ ಬ್ರಾಹ್ಮಣ ಸಮುದಾಯಗಳ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆಪ್ರೋತ್ಸಾಹ ರೂಪದ ಜಾಹೀರಾತು

# ಕೊಳಕು ರಾಜಕೀಯಕ್ಕೆ ಅಖಾಡವಾಗಿ ಬಳಕೆ

## ಕಾಂಗ್ರೆಸ್ ನಡೆಗೆ ಪ್ರಧಾನಿ ನರೇಂದ್ರ ಮೋದಿ ಖಂಡನೆ | ಮೀರಠ್ ಮೆಟ್ರೊ ರೈಲಿಗೆ ಹಸಿರು ನಿಶಾನೆ

• ಪ್ರಜೋದಯ ವರದಿ



**ಉತ್ತರ ಪ್ರದೇಶ:** ಕಾಂಗ್ರೆಸ್ ಪಕ್ಷವು ಅಂತರ ರಾಷ್ಟ್ರೀಯ ಕಾರ್ಯಕ್ರಮವನ್ನು ಕೊಳಕು ಮತ್ತು ನಾಚಿಕೆಗೇಡಿನ ರಾಜ ಕೀಯ ಅಖಾಡವಾಗಿ ಬಳಸಿಕೊಂಡಿತು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ವಾಗ್ದಾಳಿ ನಡೆಸಿದರು.

ದೆಹಲಿಯಲ್ಲಿ ನಡೆದ ಜಾಗತಿಕ ಕೃತಕ ಬುದ್ಧಿಮತ್ತೆ ಸಮಾವೇಶದಲ್ಲಿ ಕಾಂಗ್ರೆಸ್ ಪಕ್ಷದ ನಾಯಕರು ಶರ್ಟ್ ತೆಗೆದಿಟ್ಟು ಪ್ರತಿಭಟನೆ ನಡೆಸಿದ್ದನ್ನು ಅವರು ಖಂಡಿಸಿದರು. ನಮೋ ಭಾರತ್ ರೈಲು ಮತ್ತು ಮೀರಠ್ ಮೆಟ್ರೊ ನಿಲ್ದಾಣ ಸೇರಿ ಹಲವು ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಾಂಗ್ರೆಸ್ ನಡೆಯು ಎಷ್ಟರಮಟ್ಟಿಗೆ ಸೈದ್ಧಾಂತಿಕ ದಿವಾಳಿತನದ್ದು ಮತ್ತು ದರಿದ್ರವಾದುದು ಎಂಬುದರ ಸೂಚಕ ಇದು ಎಂದು ಟೀಕಿಸಿದರು.

ಕಾಂಗ್ರೆಸ್ ಪಕ್ಷವು ಎಲ್ಲಾ ಮಿತಿಗಳನ್ನು ಮೀರಿದೆ. ಪಕ್ಷದ ನಡೆಗೆ ದೇಶದಾದ್ಯಂತ ವ್ಯಾಪಕ ಟೀಕೆ ವ್ಯಕ್ತವಾಗಿದೆ. ಘಟನೆ ಯನ್ನು ಟೀಕಿಸಿ ಸತ್ಯ ಮತ್ತು ದೇಶದ ಪರವಾಗಿ ನಿಂತಿದ್ದಕ್ಕೆ ಹಲವು ವಿರೋಧ ಪಕ್ಷಗಳಿಗೆ ಧನ್ಯವಾದ ಎಂದು ಹೇಳಿದರು. ಭಾರತವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿಸಲು ಜನರು ಹಗಲುರಾತ್ರಿ ದುಡಿಯುತ್ತಿದ್ದಾರೆ. ಕೆಲವು ಪಕ್ಷಗಳಿಗೆ ದೇಶದ ಯಶಸ್ಸನ್ನು ಅರಗಿಸಿಕೊಳ್ಳಲು ಆಗುತ್ತಿಲ್ಲ ಎಂದು ದೂರಿದರು.

80 ದೇಶಗಳ ಪ್ರತಿನಿಧಿಗಳು ಮತ್ತು 20 ದೇಶಗಳ ಮುಖಂಡರು ಎ.ಐ. ಶೃಂಗ ದಲ್ಲಿ ಭಾಗಿಯಾಗಿದ್ದರು. ಅದು ದೇಶಕ್ಕೆ ಹೆಮ್ಮೆಯ ಕ್ಷಣವಾಗಿತ್ತು. ಆದರೆ ಕಾಂಗ್ರೆಸ್ ಮಾಡಿದ್ದೇನು? ಪಕ್ಷದ ನಾಯಕರು ಜಾಗತಿಕ ಸಮಾವೇಶವನ್ನು ತಮ್ಮ ಕೊಳಕು ರಾಜಕೀಯಕ್ಕೆ ಬಳಸಿ ಕೊಂಡರು. ವಿದೇಶಿ ಅತಿಥಿಗಳ ಎದುರು ಶರ್ಟ್ ತೆಗೆದಿಟ್ಟು ಬಂದರು. ನೀವು ನಗ್ನರಾಗಿ ದ್ದೀರಿ ಎನ್ನುವುದು ಈಗಾಗಲೇ ದೇಶಕ್ಕೆ ತಿಳಿದಿದೆ. ಮತ್ತೆ ಏಕೆ ಇನ್ನಷ್ಟು ಬೆತ್ತಲೆಯಾ ಗುವಿರಿ ಎಂದು ವ್ಯಂಗ್ಯವಾಡಿದರು.

ಪಕ್ಷದ ನಾಯಕರು ಮೋದಿಯನ್ನು ದ್ವೇಷಿಸುತ್ತಾರೆ. ಅವರು ನನ್ನ ಸಾವು ಬಯಸುತ್ತಾರೆ. ನನ್ನ ತಾಯಿ ಯನ್ನು ನಿಂದನೆ ಮಾಡಲೂ ಅವರು ಹಿಂಜರಿ ಯುವುದಿಲ್ಲ. ಅವರು ಬಿಜೆಪಿ ಮತ್ತು ಎನ್‌ಡಿಎಯನ್ನು ವಿರೋಧಿಸುತ್ತಾರೆ. ಅದು ಅವರ ರಾಜಕೀಯಕ್ಕೆ ಅಗತ್ಯವೂ ಇರಬಹುದು. ನಾವದನ್ನು ಸಹಿಸುತ್ತೇವೆ. ಆದರೆ ಎ.ಐ. ಶೃಂಗವು ಬಿಜೆಪಿ ಕಾರ್ಯ ಕ್ರಮವಲ್ಲ ಅದು ದೇಶದ ಕಾರ್ಯಕ್ರಮ ಎಂಬುದನ್ನು ಕಾಂಗ್ರೆಸ್ ನೆನಪಿಟ್ಟುಕೊಳ್ಳಬೇಕೆಂದು ಹೇಳಿದರು.

ಪ್ರಧಾನಿ ಕುರ್ಚಿಯಲ್ಲಿ ಕೂರಬೇಕೆಂದರೆ ಮೊದಲು ಜನರ ಮನಸ್ಸನ್ನು ಗೆಲ್ಲಬೇಕೆಂದು ಯಾರ ಹೆಸರನ್ನೂ ಉಲ್ಲೇಖಿಸದೆ ಹೇಳಿದರು.

### 82 ಕಿ.ಮೀ. ಉದ್ದದ ಕಾರಿಡಾರ್ ಸಮರ್ಪಣೆ

ಶತಾಬ್ದಿ ನಗರ ನಿಲ್ದಾಣದಿಂದ ಮೀರಠ್ ದಕ್ಷಿಣ ನಿಲ್ದಾಣದವರೆಗೆ ಅವರು ಮೆಟ್ರೊದಲ್ಲಿ ಪ್ರಯಾಣಿಸಿದರು. ಇದೇ ಸಂದರ್ಭದಲ್ಲಿ ಸುಮಾರು 12930 ಕೋಟಿ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೂ ಚಾಲನೆ ನೀಡಿದರು. 82 ಕಿ.ಮೀ. ಉದ್ದದ ದೆಹಲಿಮೀರಠ್ ನಮೋ ಭಾರತ್ ಕಾರಿಡಾರ್ ಅನ್ನು ರಾಷ್ಟ್ರಕ್ಕೆ ಸಮರ್ಪಿಸಿದರು. ಭಾರತದ ಮೊದಲ ನಮೋ ಭಾರತ್ ರೀಜನಲ್ ರ್‍ಯಾಪಿಡ್ ಟ್ರಾನ್ಸಿಟ್ ಸಿಸ್ಟಂ (ಆರ್‌ಆರ್‌ಟಿಎಸ್) ಅನ್ನು ಉದ್ಘಾಟಿಸಿದರು. ಗಂಟೆಗೆ 180 ಕಿ.ಮೀ. ವೇಗದಲ್ಲಿ ಸಾಗುವ ನಮೋ ಭಾರತ್ ರೈಲು ದೇಶದ ಮೊದಲ ಪ್ರಾದೇಶಿಕ ಕ್ಷಿಪ್ರ ಸಾರಿಗೆ ವ್ಯವಸ್ಥೆಯಾಗಿದೆ. ಇದು ಸಾಹಿಬಾಬಾದ್ ಗಾಜಿಯಾಬಾದ್ ಮೋದಿನಗರ ಮತ್ತು ಮೀರಠ್‌ನಂತಹ ಪ್ರಮುಖ ನಗರಗಳನ್ನು ದೆಹಲಿಯೊಂದಿಗೆ ಸಂಪರ್ಕಿಸುತ್ತದೆ. ಮೀರಠ್ ಮೆಟ್ರೊ ದೇಶದ ಅತ್ಯಂತ ವೇಗದ ಮೆಟ್ರೊ ವ್ಯವಸ್ಥೆಯಾಗಿದೆ. ಇದರ ಕಾರ್ಯಾಚರಣೆಯ ಗರಿಷ್ಠ ವೇಗ ಗಂಟೆಗೆ 120 ಕಿ.ಮೀ. ಆಗಿದೆ. ಇದು ನಿಗದಿತ ಸ್ಥಳಗಳಲ್ಲಿ ನಿಲುಗಡೆಯಾಗಿಯೂ 30 ನಿಮಿಷಗಳಲ್ಲಿ ಗಮ್ಯಸ್ಥಾನವನ್ನು ತಲುಪಲಿದೆ. ಇದು ರಸ್ತೆಯಲ್ಲಿ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲಿದೆ ಮತ್ತು ವಾಹನಗಳು ಹೊರ ಸೂಸುವ ಇಂಗಾಲದ ಡೈ ಆಕ್ಸೈಡ್ ಪ್ರಮಾಣವನ್ನು ತಗ್ಗಿಸಲಿದೆ.

## ನಾಗರಿಕರು ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಿ

• ಪ್ರಜೋದಯ ವರದಿ




ಹೊಳೆನರಸೀಪುರ: ನಾಗರಿಕರು ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ವಹಿಸದೆ ಕಾಲ ಕಾಲಕ್ಕೆ ವೈದ್ಯರ ಬಳಿ ತಪಾಸಣೆ ಮಾಡಿಸಿಕೊಳ್ಳಬೇಕೆಂದು ಸಂಸದ ಶ್ರೇಯಸ್ ಪಟೇಲ್ ಅವರು ಸಲಹೆ ನೀಡಿದರು.

ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ನಗರದ ನಿವೃತ್ತ ಶಿಕ್ಷಕ ಗಂಗಾಧರಸ್ವಾಮಿ ಅವರ 5ನೇ ವರ್ಷದ ಪುಣ್ಯ ಸ್ಮರಣೆ ಪ್ರಯುಕ್ತ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಡಿ. ಶೆಟ್ಟಿ ಕುಟುಂಬಸ್ಥರು ಹಾಗು ಅಗರ್ವಾಲ್ ಕಣ್ಣಿನ ಆಸ್ಪತ್ರೆ ವತಿಯಿಂದ ಹಮ್ಮಿಕೊಂಡಿದ್ದ ಕಣ್ಣಿನ ಉಚಿತ ತಪಾಸಣೆ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿ, ಕಣ್ಣು ದೇಹದ ಪ್ರಮುಖ ಅಂಗ. ನೇತ್ರವನ್ನು ರಕ್ಷಿಸಲು ಪೂರಕವಾಗಿ ಈ ಶಿಬಿರವನ್ನು ಆಯೋಜಿಸಿರುವುದು ಹೆಮ್ಮೆಯ ವಿಷಯ. ಅದರ ಸದುಪಯೋಗವನ್ನು ಪಡೆದುಕೊಳ್ಳುವುದರ ಮೂಲಕ ನೇತ್ರ ರಕ್ಷಿಸಿಕೊಳ್ಳಬೇಕೆಂದು ತಿಳಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ಟಿ.ಲಕ್ಷ್ಮಣ ಅವರು ಮಾತನಾಡಿ, ಬಿ.ಆರ್. ಅಂಬೇಡ್ಕರ್ ನಗರದ ಡಿ. ಶೆಟ್ಟಿ ಕುಟುಂಬಸ್ಥರು ಹಲವು ಆಸ್ಪತ್ರೆ ಗಳ ಸಹಯೋಗದೊಂದಿಗೆ ಉಚಿತ ವಾಗಿ ಜನಸಾಮಾನ್ಯರಿಗೆ ನೆರವಾಗು ವಂತಹ ತಪಾಸಣಾ ಶಿಬಿರ ನಡೆಸಲು ಮುಂದಾಗಿರುವುದು ಖುಷಿಯ ಸಂಗತಿ. ಸಾಮಾಜಿಕ ಕಳಕಳಿಯ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳುವುದರ ಮೂಲಕ ಜನಸ್ನೇಹಿಯಾಗಿ ಸೇವೆ ಸಲ್ಲಿಸಲು ಸದಾ ಮುಂದಾಗಬೇಕೆಂದು ಮನವಿ ಮಾಡಿದರು.

ಪುರಸಭೆ ಮಾಜಿ ಸದಸ್ಯೆ ನಾಗರತ್ನ ಸದಾಶಿವ, ನಿವೃತ್ತ ಸೈನಿಕ ಮಂಜುನಾಥ್, ಎಸ್‌ಬಿಐನ ಮಂಜುನಾಥ್, ಶಿಕ್ಷಣ ಇಲಾಖೆಯ ನರಸಿಂಹಮೂರ್ತಿ ಮತ್ತಿತರರಿದ್ದರು.

## ಜೇನುಕಲ್ ಸಿದ್ದೇಶ್ವರ ಬೆಟ್ಟದಲ್ಲಿ ಪ್ಲಾಸ್ಟಿಕ್ ಹಾವಳಿ



• ಪ್ರಜೋದಯ ವರದಿ

**ಹಾಸನ:** ಅರಸೀಕೆರೆ ತಾಲ್ಲೂಕಿನ ಸುಪ್ರಸಿದ್ಧ ಜೇನುಕಲ್ ಸಿದ್ದೇಶ್ವರ ಬೆಟ್ಟದಲ್ಲಿ ಪ್ಲಾಸ್ಟಿಕ್ ಹಾವಳಿ ಮಿತಿ ಮೀರಿದ್ದು, ಸ್ವಚ್ಛತೆ ಎಂಬುದು ಮರೀಚಿಕೆಯಾಗಿದೆ.

ಸಿದ್ದೇಶ್ವರ ಸ್ವಾಮಿ ದರ್ಶನಕ್ಕೆ ನಿತ್ಯ ಸಾವಿರಾರು ಭಕ್ತರು ಬರುತ್ತಾರೆ. ಜಿಲ್ಲೆ ಮಾತ್ರವಲ್ಲದೆ ಹೊರ ಜಿಲ್ಲೆಯಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಬರುವುದರಿಂದ ಇಲ್ಲಿ ಸ್ವಚ್ಛತೆ ಕಾಪಾಡಬೇಕಿದ್ದ ಸ್ಥಳೀಯ ಆಡಳಿತ ಸಂಪೂರ್ಣ ಮೈಮರೆತಿದೆ. ಎಲ್ಲೆಂದರಲ್ಲಿ ಲೆಕ್ಕಕ್ಕೆ ಸಿಗದಷ್ಟು ನೀರಿನ ಬಾಟಲಿ, ಚಿಪ್ಸ್ ಪ್ಯಾಕೆಟ್ ಹಾಗು ಕಸದ ಕವರ್‌ಗಳು ಬಿದ್ದಿರುವುದು ಕಂಡು ಬರುತ್ತಿದೆ. ಬೆಟ್ಟದ ಇಳಿಜಾರುಗಳಲ್ಲಿ ರಾಶಿ ಬಿದ್ದಿರುವ ತ್ಯಾಜ್ಯದಿಂದ ಪರಿಸರ ಹಾಳಾಗುತ್ತಿದೆ. ಮೂಕ ಪ್ರಾಣಿಗಳ ಜೀವಕ್ಕೂ ಪ್ಲಾಸ್ಟಿಕ್ ಮಾಲಿನ್ಯ ಕುತ್ತು ತರುತ್ತಿದೆ.

ದೇವಸ್ಥಾನಕ್ಕೆ ಕೋಟ್ಯಾಂತರ ರೂಪಾಯಿ ಆದಾಯ ಹರಿದು ಬರುತ್ತಿದ್ದರೂ, ಕಸ ವಿಲೇವಾರಿಗೆ ಸಮರ್ಪಕ ವ್ಯವಸ್ಥೆ ಇಲ್ಲದಿರುವುದು ಭಕ್ತರ ಅಸಮಾಧಾನಕ್ಕೆ ಕಾರಣವಾಗಿದೆ. ಡಸ್ಟ್‌ಬಿನ್‌ಗಳ ಕೊರತೆ ಹಾಗು ಅವೈಜ್ಞಾನಿಕ ತ್ಯಾಜ್ಯ ನಿರ್ವಹಣೆ ಪರಿಸ್ಥಿತಿಯನ್ನು ಮತ್ತಷ್ಟು ಗಂಭೀರಗೊಳಿಸಿದೆ.

ಸ್ವಚ್ಛತಾ ಕಾರ್ಯ ಕೈಗೊಳ್ಳದಿರುವುದರಿಂದ ಸಾಂಕ್ರಾಮಿಕ ರೋಗಗಳ ಭೀತಿ ಎದುರಾಗಿದೆ. ಆಡಳಿತ ಮಂಡಳಿಯ ವಿರುದ್ಧ ಸಾರ್ವಜನಿಕರ ಆಕ್ರೋಶ ಹೆಚ್ಚಾಗಿದೆ. ಪ್ಲಾಸ್ಟಿಕ್ ಮುಕ್ತವಾಗಲಿ ಪವಿತ್ರ ಕ್ಷೇತ್ರ ಎಂಬ ಘೋಷಣೆ ಮೊಳಗಿಸುತ್ತಿರುವ ಭಕ್ತರು, ತಕ್ಷಣವೇ ಸ್ವಚ್ಛತಾ ಕಾರ್ಯಾಚರಣೆ ಕೈಗೊಂಡು ಶಾಶ್ವತ ತ್ಯಾಜ್ಯ ನಿರ್ವಹಣಾ ವ್ಯವಸ್ಥೆ ಜಾರಿಗೆ ತರಬೇಕೆಂದು ತಾಲ್ಲೂಕು ಆಡಳಿತವನ್ನು ಒತ್ತಾಯಿಸಿದ್ದಾರೆ.

# ಭಗವಂತನ ಸೇವೆ, ಸ್ಮರಣೆಯಿಂದ ಲಭಿಸಲಿದೆ ಮುಕ್ತಿ

• ಪ್ರಜೋದಯ ವರದಿ





**ಚನ್ನರಾಯಪಟ್ಟಣ:** ಭಗವಂತನ ಸ್ಮರಣೆಯೊಂದಿಗೆ ಧರ್ಮ ಕಾರ್ಯ ಗಳಲ್ಲಿ ತೊಡಗಿಕೊಂಡರೆ ಪುಣ್ಯದ ಜೊತೆಗೆ ಬದುಕಿನಲ್ಲಿ ಮುಕ್ತಿ ಸಿಗಲಿದೆ ಎಂದು ಧರ್ಮದರ್ಶಿ ಶ್ರೀ ಶ್ರೀಧರ ಸ್ವಾಮೀಜಿ ಅವರು ಹೇಳಿದರು.

ತಾಲ್ಲೂಕಿನ ಕೆ.ಹೊಸೂರು ಗೇಟ್ ಬಳಿ ಇರುವ ಶ್ರೀಕ್ಷೇತ್ರ ಪುಣ್ಯಧಾಮ ದಲ್ಲಿ ಶ್ರೀ ಶನೇಶ್ಚರ ಹಾಗೂ ಶ್ರೀ ಮುನಿ ಜಡೇಶ್ವರ ಸ್ವಾಮಿಯ 28ನೇ ವರ್ಷದ ಜಾತ್ರಾ ಮಹೋತ್ಸವದ ಪ್ರಯುಕ್ತ ಏರ್ಪಡಿಸಿದ್ದ ಕೊಂಡೋ ತ್ಸವ ಹಾಗೂ ಧಾರ್ಮಿಕ ಸಭೆಗೆ ಚಾಲನೆ ಕೊಟ್ಟು ಆಶೀರ್ವಚನ ನೀಡಿದ ಅವರು, ಭಗವಂತನ ಅನು ಗ್ರಹವಿಲ್ಲದೆ ಈ ಭೂಮಿಯ ಮೇಲೆ ಒಂದು ಹುಲ್ಲು ಕಡ್ಡಿಯೂ ಅಲುಗಾ ಡಲು ಸಾಧ್ಯವಿಲ್ಲ. ಶ್ರೀ ಶನೇಶ್ಚರ ಸ್ವಾಮಿಯವರನ್ನು ಆರಾಧಿಸಿದರೆ ಸಕಲ ಸೌಭಾಗ್ಯಗಳು ನಿಮ್ಮದಾಗಲಿವೆ. ಭಗವಂತನ ಸೇವೆಯಲ್ಲಿ ತೊಡಗಿದರೆ ಬದುಕಿನಲ್ಲಿ ಶಾಂತಿ, ನೆಮ್ಮದಿ ಹಾಗೂ ಮುಕ್ತಿ ದೊರೆಯಲಿದೆ. ಭಕ್ತಾಧಿಗಳಿಗೆ ಶ್ರೀ ಶನೇಶ್ಚರ ಸ್ವಾಮಿಯು ಒಲಿದಿ ದ್ದಾನೆ. ಅದರಿಂದ ಹರಕೆ ಮಾದರಿ ಯಲ್ಲಿ ಭಕ್ತರ ಸಹಕಾರದಿಂದ ದೇವಾ ಲಯವು ಹಂತ ಹಂತವಾಗಿ ಅಭಿವೃದ್ಧಿ ಕಂಡಿದ್ದು, ಕಳೆದ ವರ್ಷ ಲೋಕಾರ್ಪಣೆ ಮಾಡಲಾಗಿದೆ. ದಿನದಿಂದ ದಿನಕ್ಕೆ ಭಕ್ತರ ಸಂಖ್ಯೆಯು ಸಹ ಏರಿಕೆಯಾಗುತ್ತಿದೆ ಎಂದು ತಿಳಿಸಿದರು.

ಕ್ಷೇತ್ರದಲ್ಲಿ ಪ್ರತಿದಿನವೂ ಬರುವ ಭಕ್ತರಿಗೆ ಅನ್ನದಾಸೋಹ ನಡೆಸಲಾ ಗುತ್ತಿದೆ. ಗೋಶಾಲೆ ತೆರೆದಿದ್ದು, ದೇವಾಲಯ ಹಾಗೂ ಅನ್ನ ದಾಸೋಹಕ್ಕೆ ಸಾಕಾಗುವಷ್ಟು ಹಾಲು, ಮೊಸರು ಹಾಗೂ ಬೆಣ್ಣೆ ದೊರೆಯುತ್ತಿದೆ. ಜೊತೆಗೆ ಕೊಡುಗೈ ದಾನಿಗಳ ಹೆಚ್ಚಿನ ಸಹಕಾರದಿಂದ ಪ್ರತಿ ವರ್ಷವೂ ಜಾತ್ರಾ ಮಹೋತ್ಸವವನ್ನು ಆಚರಿಸಲಾಗುತ್ತಿದೆ ಎಂದರು.

ಶಾಸಕ ಸಿ.ಎನ್.ಬಾಲಕೃಷ್ಣ ಅವರು ಮಾತನಾಡಿ, ಶ್ರೀಕ್ಷೇತ್ರ ಪುಣ್ಯಧಾಮದ ಅಭಿವೃದ್ಧಿಗೆ ಶಾಸಕರ ನಿಧಿಯಿಂದ 5 ಲ.ರೂ. ಅನುದಾನ ಕಲ್ಪಿಸಲಾಗಿದ್ದು, ಮುಂದಿನ ದಿನಗಳಲ್ಲಿ ಅಗತ್ಯಕ್ಕೆ ಅನುಗುಣವಾಗಿ ಮತ್ತಷ್ಟು ಅನುದಾನ ಹಾಗೂ ದೇಣಿಗೆ ನೀಡಲಾಗುವುದು. ಭಾರತೀಯ ಸಂಸ್ಕೃತಿಯು ಹಿಂದೂ ಧರ್ಮದ ತಳಹದಿಯ ಮೇಲೆ ನಿಂತಿದೆ. ಮಠ-ಮಾನ್ಯಗಳು ಜನ ಸಾಮಾನ್ಯನ್ನು ಧರ್ಮದ ಹಾದಿಯಲ್ಲಿ ಕರೆದೊಯ್ದು ಮುಕ್ತಿ ಕಲ್ಪಿಸುವಲ್ಲಿ ಹಗಲಿರುಳು ಶ್ರಮಿಸುತ್ತಿರುವುದು ಧಾರ್ಮಿಕ ಬೆಳವಣಿಗೆಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ ಮಾತ ನಾಡಿ, ದೇವಾಲಯಗಳಿಗೆ ಭೇಟಿ ನೀಡಿ ಪೂಜೆ ಸಲ್ಲಿಸಿದರೆ ಮನಸ್ಸಿಗೆ ಶಾಂತಿ ಹಾಗೂ ನೆಮ್ಮದಿ ಸಿಗಲಿದೆ. ನಾವು ದುಡಿಯುವ ಶೇ.10 ರಷ್ಟು ಹಣವನ್ನು ಧರ್ಮ ಕಾರ್ಯಗಳಿಗೆ ವಿನಿಯೋಗ ಮಾಡಬೇಕು. ಧರ್ಮ ಕಾರ್ಯಗಳೊಂದಿಗೆ ಸೇವೆಯಲ್ಲಿ ತೊಡಗಿರುವ ಮಠ-ಮಾನ್ಯಗಳಿಗೆ ಸೇವಕರಾಗಿ ನಿಲ್ಲಬೇಕೆಂದರು.

ಕಾಂಗ್ರೆಸ್ ಮುಖಂಡ ಅಣತಿ ಆನಂದ್ ಮಾತನಾಡಿ, ಶಾಲೆಗಳಲ್ಲಿ ಮೌಲ್ಯಯುತ ಶಿಕ್ಷಣ ದೊರೆತರೆ, ದೇವಾಲಯ, ಮಠ-ಮಾನ್ಯಗಳಲ್ಲಿ ಧರ್ಮ, ಸಂಸ್ಕೃತಿ ಹಾಗೂ ಸಂಸ್ಕಾರ ಸಿಗಲಿದೆ. ತಂದೆ-ತಾಯಿ ಹಾಗೂ ಗುರು ಹಿರಿಯರಿಗೆ ಗೌರವ ನೀಡ ಬೇಕು. ಇದು ನಮ್ಮ ಸಂಸ್ಕೃತಿಯ ಭಾಗವಾಗಿದೆ ಎಂದು ತಿಳಿಸಿದರು.

ಇದಕ್ಕೂ ಮೊದಲು ಸಂಜೆ ಸುಮಾರಿನಿಂದಲೇ ಶ್ರೀ ಶನೇಶ್ಚರ ಸ್ವಾಮಿ, ಶ್ರೀ ಜಡೆ ಮುನೇಶ್ವರ ಹಾಗೂ ಶ್ರೀ ಚಾಮುಂಡೇಶ್ವರಿ ದೇವಿಯ ಬೆಳ್ಳಿ ರಥೋತ್ಸವವು ಮಂಗಳವಾದ್ಯದೊಂದಿಗೆ ವಿಜೃಂಭಣೆಯಿಂದ ನೆರವೇರಿತು. ಕೆಂಡಕೊಂಡೋತ್ಸವದ ಬಳಿಕ ಅನ್ನದಾಸೋಹ ನಡೆಯಿತು. ಚನ್ನರಾಯಪಟ್ಟಣ, ನಾಗಮಂಗಲ, ತಿಪಟೂರು, ತುರುವೇಕೆರೆ ಸೇರಿ ಸುತ್ತಮುತ್ತಲ ಗ್ರಾಮಗಳಿಂದ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು.

## ನವಿಲೆ ನಾಗೇಶ್ವರಸ್ವಾಮಿ ದೇವಾಲಯ ಅಭಿವೃದ್ಧಿಗೆ ಮನವಿ

» ಮೊದಲನೇ ಪುಟದಿಂದ

ಗೋಪುರ ಹಾಗು ರಥದ ಮನೆ ನಿರ್ಮಾಣಕ್ಕೆ ಮುಂಬರುವ ದಿನಗಳಲ್ಲಿ ಅನುದಾನ ಒದಗಿಸಲಾಗುವುದೆಂದು ಹೇಳಿದರು.

ತಿಪಟೂರು ತಾಲ್ಲೂಕಿನ ಕೆರಗೋಡಿ-ರಂಗಾಪುರ ಸುಕ್ಷೇತ್ರ ಮಠದ ಗುರು ಪರದೇಶಿ ಕೇಂದ್ರ ಸ್ವಾಮೀಜಿ ಮಾತನಾಡಿ, ಕ್ಷೇತ್ರಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಸರ್ಪ ಸಂಸ್ಕಾರ, ಆಶ್ಲೇಷ ಬಲಿ ಪೂಜೆ ಸೇರಿ ಸರ್ಪದೋಷ ನಿವಾರಣೆಗೆ ವಿಶೇಷ ಪೂಜೆಗಳು ನಡೆಯುತ್ತವೆ. ಚರ್ಮ ರೋಗಗಳಿಗೆ ಈ ಕ್ಷೇತ್ರದಲ್ಲಿ ಪೂಜೆ ಮಾಡಿದರೆ ಫಲ ದೊರೆಯುತ್ತದೆಂಬ ನಂಬಿಕೆಯಿದೆ ಎಂದರು. ವಿಶ್ವ ಒಕ್ಕಲಿಗರ ಮಠದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಮಾತನಾಡಿ, ತಾವು ಚನ್ನರಾಯಪಟ್ಟಣ ತಹಶೀಲ್ದಾರ್, ಉಪವಿಭಾಗಾಧಿಕಾರಿಯಾಗಿದ್ದಾಗ ದೇವಾಲಯ ಅಭಿವೃದ್ಧಿಗೆ ಆದ್ಯತೆ ನೀಡಲಾಗಿತ್ತು. ಅಂದಿನ ತಹಶೀಲ್ದಾರ್ ವರಪ್ರಸಾದ್ ರೆಡ್ಡಿ ಅವರಮುತುವರ್ಜಿಯಿಂದಅನ್ನದಾಸೋಹ ಮಂಟಪ ನಿರ್ಮಾಣವಾಗಿದೆ. ದಾನಿಗಳ ಸಹಕಾರ ದಿಂದ ಭೂಮಿ ಖರೀದಿಸಲಾಗಿತ್ತು. ಅದೇ ಜಾಗದಲ್ಲಿ ಈಗ ಕಲ್ಯಾಣಮಂಟಪ ನಿರ್ಮಾಣವಾಗುತ್ತಿದೆ ಯೆಂದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ನವಿಲೆ ಪರಮೇಶ್, ತಹಶೀಲ್ದಾರ್ ಶಂಕರಪ್ಪ ಮಾತನಾಡಿದರು. ವಿಶೇಷ ಪೂಜೆ, ಅಭಿಷೇಕ, ಹೋಮ ಹಾಗು ನೂತನ ರಥಕ್ಕೆ ಪ್ರಾಣ ಪ್ರತಿಷ್ಠಾಪನೆ ನೆರವೇರಿತು. ಸಂಸದ ಶ್ರೇಯಸ್ ಪಟೇಲ್, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ. ಗೋಪಾಲಸ್ವಾಮಿ, ಚನ್ನರಾಯಪಟ್ಟಣ ನಗರ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎ.ಸಿ.ಆನಂದ್ ಕುಮಾರ್ ವಿಶೇಷ ಪೂಜೆ ಸಲ್ಲಿಸಿದರು.

# ಮಿಲ್ಲರ್ ಅರ್ಧ ಶತಕ: ಭಾರತಕ್ಕೆ 188 ರನ್ ಗುರಿ

• ಪ್ರಜೋದಯ ವರದಿ

**ಅಹಮದಾಬಾದ್:** ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಸೂಪರ್ 8 ಪಂದ್ಯದಲ್ಲಿ ಟೀಂ ಇಂಡಿಯಾ ವಿರುದ್ಧ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ ತಂಡವು 20 ಓವರ್‌ಗಳ ಅಂತ್ಯಕ್ಕೆ 7 ವಿಕೆಟ್ ನಷ್ಟಕ್ಕೆ 187 ರನ್ ಗಳಿಸಿದೆ.

ಇನಿಂಗ್ಸ್ ಆರಂಭದಲ್ಲಿ ಭಾರತದ ಬೌಲರ್‌ಗಳ ಎದುರು ರನ್ ಗಳಿಸಲು ದಕ್ಷಿಣ ಆಫ್ರಿಕಾ ಬ್ಯಾಟರ್‌ಗಳು ಪರದಾಡಿದರು. 20 ರನ್ ಗಳಿಸುವಷ್ಟರಲ್ಲೇ 3 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದ ಹರಿಣಗಳಿಗೆ, ಅನುಭವಿ ಬ್ಯಾಟರ್ ಡೇವಿಡ್ ಮಿಲ್ಲರ್ ಹಾಗೂ ಯುವ ಆಟಗಾರ ಡೆವಾಲ್ಡ್ ಬ್ರೆವಿಸ್ ಅವರು 97 ರನ್‌ಗಳ ಜೊತೆಯಾಟ ಆಡುವ ಮೂಲಕ ಆಸರೆಯಾದರು.

ಡೇವಿಡ್ ಮಿಲ್ಲರ್ ಅವರು 35 ಎಸೆತಗಳಲ್ಲಿ 7 ಬೌಂಡರಿ, 3 ಸಿಕ್ಸರ್ ಸಹಿತ 63 ರನ್‌ಗಳಿಸಿದರೆ, ಡೆವಾಲ್ಡ್ ಬ್ರೆವಿಸ್ 29 ಎಸೆತಗಳಲ್ಲಿ 3 ಬೌಂಡರಿ, 3 ಸಿಕ್ಸರ್ ಸಹಿತ 45 ರನ್ ಹೊಡೆದರು.

ಡೆತ್ ಓವರ್‌ನಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದ ಟ್ರಿಸ್ಟಾನ್ ಸ್ಟಬ್ಸ್, ಕೇವಲ 24 ಎಸೆತಗಳಲ್ಲಿ 1 ಬೌಂಡರಿ, 3 ಸಿಕ್ಸರ್ ಸಹಿತ 44 ರನ್ ಗಳಿಸುವ ಮೂಲಕ ತಂಡದ ಮೊತ್ತವನ್ನು 185 ರನ್ ಗಡಿ ದಾಟುವಂತೆ ಮಾಡಿದರು.

ಭಾರತದ ಪರ ಬೂಮ್ರಾ 3, ಅರ್ಷದೀಪ್ ಸಿಂಗ್ 2 ವಿಕೆಟ್ ಪಡೆದರು. ಪಾಂಡ್ಯ, ದುಬೆ ಹಾಗೂ ವರುಣ್ ದುಬಾರಿಯಾದರು. ಸೂಪರ್ 8 ಮೊದಲ ಪಂದ್ಯ ಗೆಲ್ಲಲು ಭಾರತವು 188 ರನ್ ಗಳಿಸಬೇಕಿದೆ.



### ಪಂದ್ಯ ವೀಕ್ಷಿಸಿದ ಸುಂದರ್ ಪಿಚೈ

ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಸೂಪರ್8 ಪಂದ್ಯ ವನ್ನು ಗೂಗಲ್ ಸಿಇಒ ಸುಂದರ್ ಪಿಚೈ ವೀಕ್ಷಿಸಿದರು. ಮೈದಾನ ದಲ್ಲಿ ಐಸಿಸಿ ಮುಖ್ಯಸ್ಥ ಜಯ್ ಶಾ ಅವರೊಂದಿಗೆ ಪಂದ್ಯವನ್ನು ನೋಡಿದರು. ಗೂಗಲ್ ಪಿಕ್ಸೆಲ್ ಸ್ಮಾರ್ಟ್ ಫೋನ್, ಈ ಟೂರ್ನಿಗೆ ಅಧಿಕೃತ ಪಾಲುದಾರರಾಗಿದೆ.

# ಕುಮಾರಸ್ವಾಮಿ-ಸಿದ್ದರಾಮಯ್ಯ ವಾಕ್ಸಮರ ಜೋರು

» ಮೊದಲನೇ ಪುಟದಿಂದ

ವಿನಯಪೂರ್ವಕವಾಗಿ ಕೇಳಬಯಸುವೆ. ಹಾಸನದ ಪುಟ್ಟಸ್ವಾಮಿಗೌಡ, ಸಿ.ಎಸ್. ಪುಟ್ಟೇಗೌಡ, ಹೆಚ್.ಕೆ.ಜವರೇಗೌಡ, ಹೆ.ಎಂ.ವಿಶ್ವನಾಥ್, ಹನುಮೇಗೌಡ, ಮಂಡ್ಯದ ಕೆ.ಎನ್.ನಾಗೇಗೌಡ, ಕೆ.ಆರ್.ಪೇಟೆ ಕೃಷ್ಣ, ವೈ.ಕೆ.ರಾಮಯ್ಯ, ಸಿ. ಬೈರೇಗೌಡ, ಬಚ್ಚೇಗೌಡ, ಬಿ.ಎಲ್.ಶಂಕರ್, ಸಿ. ನಾರಾಯಣಸ್ವಾಮಿ, ಚಲುವರಾಯಸ್ವಾಮಿ ಮೊದಲಾದವರೆಲ್ಲ ಏಕೆ ದೇವೇಗೌಡರನ್ನು ಬಿಟ್ಟು ಹೊರ ಬಂದರು ಎನ್ನುವುದನ್ನು ನಾನು ವಿವರಿಸಿ ಹೇಳಬೇಕಾಗಿಲ್ಲವೆಂದು ತಿವಿದಿದ್ದಾರೆ.

ದೇವೇಗೌಡರಿಂದ ಮೋಸಕ್ಕೊಳಗಾದ ನಾಯಕರಿಗೆ ಅವಕಾಶ ನೀಡಿ ರಾಜಕೀಯವಾಗಿ ಬೆಳೆಸುತ್ತಿರುವುದು ಕೂಡಾ ಕಾಂಗ್ರೆಸ್ ಪಕ್ಷ. ಕೆಂಗಲ್ ಹನುಮಂತಯ್ಯ, ಕಡಿದಾಳ್ ಮಂಜಪ್ಪ, ಎಸ್.ಎಂ. ಕೃಷ್ಣ ಅವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದರೆ, ಅದಕ್ಕೆ ಕಾಂಗ್ರೆಸ್ ಕಾರಣವೆಂದು ಹೇಳಿದ್ದಾರೆ.

**ನೀವು ಸಾಮಾಜಿಕ ನ್ಯಾಯದ ಸಂಹಾರಿ**

ಸಿದ್ದರಾಮಯ್ಯ ಅವರ ಹೇಳಿಕೆಗೆ ತಿರುಗೇಟು ನೀಡಿರುವ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು, ಸಾಮಾಜಿಕ ನ್ಯಾಯದ ಸೋಗುಕಾರ, ಸಾಮಾಜಿಕ ನ್ಯಾಯದ ಸಂಹಾರಿ ನೀವು. ನಿಮಗೆ ರಾಜಕೀಯ ಶಕ್ತಿ-ಬದುಕು ಕೊಟ್ಟ ದೇವೇಗೌಡರ ಕಡೆ ಬೊಟ್ಟು ಮಾಡುವುದು ಆಘಾತಕಾರಿ. ಇವತ್ತು ನಿಮಗೆ ಸಿಕ್ಕಿರುವ ಅಧಿಕಾರ, ಸಾಮಾಜಿಕ ನ್ಯಾಯಕಾರ ಎಂಬ ಪೋಷಾಕು ಎಲ್ಲವೂ ದೇವೇಗೌಡರ ದೇಣಿಗೆ ಎಂದು ವಾಗ್ದಾಳಿ ನಡೆಸಿದ್ದಾರೆ.

ನೀವೂ ಅವರ ಸಾಮಾಜಿಕ ನ್ಯಾಯದ ಫಲ ಮತ್ತು ಫಲಾನುಭವಿ. ಸ್ವಜಾತಿ, ಕುಟುಂಬ ಎಂದು ಅವರು ಆವತ್ತೇ ಭಾವಿಸಿದ್ದಿದ್ದರೆ ನೀವು ಹಣಕಾಸು ಮಂತ್ರಿ ಆಗುವುದಿರಲಿ, ನಿಗಮದ ಅಧ್ಯಕ್ಷಗಿರಿಯೂ ದಕ್ಕುತ್ತಿರಲಿಲ್ಲ. ಅಂದು ನಿಮ್ಮನ್ನು ಹಣಕಾಸು ಮಂತ್ರಿ ಮಾಡಲೇಬೇಕೆಂದು ಹಠತೊಟ್ಟ ಗೌಡರಿಗೆ ಅವತ್ತಿನ ಅವರ ಸಮಕಾಲೀನರು ನಿಮ್ಮ ಬಗ್ಗೆ ಏನೆಲ್ಲಾ ಗುಣಾವಗಾನ ಮಾಡಿ ಬಣ್ಣಿಸಿದ್ದರೆನ್ನುವುದು ನಿಮಗೆ ತಿಳಿದಿರಬೇಕಲ್ಲವೇ ಎಂದಿದ್ದಾರೆ.

ನೀವು ಪಟ್ಟಿ ಮಾಡಿರುವ ಒಕ್ಕಲಿಗ ನಾಯಕರ ಹೆಸರುಗಳನ್ನು ಓದಿದೆ. ಪಾಪ... ನೀವು ಅವರ ಹೆಸರುಗಳನ್ನು ಉಲ್ಲೇಖಿಸಿ ಅವರನ್ನೂ ಅಪಹಾಸ್ಯ ಮಾಡಿದ್ದೀರಿ. ನೀವೂ ಅಪಹಾಸ್ಯಕ್ಕೆ ತುತ್ತಾಗಿದ್ದಲ್ಲದೆ, ನಗೆಪಾಟಲಿಗೀಡಾಗಿ ದ್ದೀರೆಂದು ಕುಟುಕಿದ್ದಾರೆ.

## ದಿ|| ಹಾ.ರ.ನಾಗರಾಜ್ ಜನ್ಮ ದಿನದ ಪ್ರಯುಕ್ತ ಆರೋಗ್ಯ ತಪಾಸಣೆ



• ಪ್ರಜೋದಯ ವರದಿ

**ಹಾಸನ:** ನಗರದ ಶಿವಜ್ಯೋತಿ ಕಲ್ಯಾಣ ಮಂಟಪದಲ್ಲಿ ದಿ|| ಹಾ.ರಾ.ನಾಗರಾಜ್ ಅವರ ಹುಟ್ಟುಹಬ್ಬದ ಅಂಗವಾಗಿ ಹಮ್ಮಿಕೊಂಡಿದ್ದ ಆರೋಗ್ಯ ಉಚಿತ ತಪಾಸಣಾ ಶಿಬಿರದಲ್ಲಿ ಶಾಸಕ ಹೆಚ್.ಪಿ.ಸ್ವರೂಪ್ ಭಾಗವಹಿಸಿದರು.

ಈ ವೇಳೆ ಮಾತನಾಡಿದ ಅವರು, ಹಾ.ರ.ನಾಗರಾಜ್ ಅವರು ಸಮಾಜಮುಖಿ ಕಾರ್ಯಕ್ರಮ ಮಾಡುವ ಮೂಲಕ ಹಾಸನದಲ್ಲಿ ಜನಮನ್ನಣೆ ಗಳಿಸಿದ್ದರು. ಬದುಕಿದ್ದಾಗ ಸಾಕಷ್ಟು ಜನರಿಗೆ ಸಹಾಯ ಮಾಡುವ ಮೂಲಕ ಜನರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದ್ದಾರೆ. ಅವರ ಮಗ ಪ್ರಶಾಂತ್ ನಾಗರಾಜ್ ಅವರು ಕೂಡ ನಗರಸಭೆ ಸದಸ್ಯರಾಗಿ ಸಾಕಷ್ಟು ಕೆಲಸ ಮಾಡಿದ್ದಾರೆ. ನಮ್ಮ ಪಕ್ಷ ದಲ್ಲಿಯೂ ಕೂಡ ಸಕ್ರಿಯವಾಗಿ ಗುರುತಿಸಿಕೊಂಡು ಸಮಾಜ ಸೇವೆ ಮಾಡುತ್ತಿದ್ದಾರೆಂದರು.

ಹಾ.ರ.ನಾಗರಾಜ್ ಹಾಗು ಅವರ ಮಗ ಪ್ರಶಾಂತ ನಾಗರಾಜ್ ನಮ್ಮನ್ನು ಅಗಲಿದ್ದಾರೆ. ಅವರಿಬ್ಬರ ಆತ್ಮಕ್ಕೂ ಶಾಂತಿ ಸಿಗಲಿ. ಅವರ ಹೆಸರಿನಲ್ಲಿ ಆರೋಗ್ಯ ತಪಾಸಣಾ ಶಿಬಿರ ನಡೆಯುತ್ತಿರುವುದು ಉತ್ತಮ ಕಾರ್ಯ. ಜನರು ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ ತಮ್ಮ ಆರೋಗ್ಯ ರಕ್ಷಣೆಯತ್ತ ಗಮನಕೊಡಬೇಕೆಂದರು.

## 5 ವಿಧಾನಸಭಾ ಕ್ಷೇತ್ರಗಳಿಗೆ ಮುಸ್ಲಿಂ ಲೀಗ್ ಬೇಡಿಕೆ

**ಚೆನ್ನೈ:** ಮುಂಬರುವ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಮುಸ್ಲಿಂ ಲೀಗ್ ಪಕ್ಷಕ್ಕೆ ಐದು ವಿಧಾನ ಸಭಾ ಕ್ಷೇತ್ರಗಳನ್ನು ನೀಡುವಂತೆ ಪಕ್ಷದ ಮುಖಂಡರು ಡಿಎಂಕೆ ನಾಯಕರಲ್ಲಿ ಮನವಿ ಮಾಡಿದ್ದಾರೆ.


ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ (ಐಯುಎಂಎಲ್) ಪಕ್ಷದ ಅಧ್ಯಕ್ಷ ಖಾದರ್ ಮೊಹಿದ್ದೀನ್ ಅವರು ಭಾನುವಾರ ಡಿಎಂಕೆ ನಾಯಕರಲ್ಲಿ ಈ ಮನವಿ ಮಾಡಿದ್ದಾರೆ. ಸ್ಥಾನ ಹಂಚಿಕೆ ಸಮಿತಿ ಅಧ್ಯಕ್ಷ ಟಿ.ಆರ್. ಬಾಲು ಅವರೊಂದಿಗೆ ಎರಡು ಸುತ್ತಿನ ಮಾತುಕತೆ ನಡೆದಿದೆ. ನಾವು 5 ಸ್ಥಾನಗಳನ್ನು ಬಿಟ್ಟುಕೊಡುವಂತೆ ಅವರಿಗೆ ಮನವಿ ಮಾಡಿದ್ದೇವೆಂದು ಹೇಳಿದರು.

ಐಯುಎಂಎಲ್ ರಾಜಕೀಯ ಪಕ್ಷ ಮಾತ್ರವಲ್ಲ, ಅದು ನಮ್ಮ ಸಮುದಾಯ ಆಧಾರಿತ ಪಕ್ಷವಾಗಿದ್ದು, ತಮಿಳುನಾಡಿನ 60 ಲಕ್ಷಕ್ಕೂ ಹೆಚ್ಚು ಮುಸ್ಲಿಂ ಮತದಾರರನ್ನು ಪ್ರತಿನಿಧಿಸುತ್ತದೆ ಎಂದು ಅವರು ಹೇಳಿದರು.

ಕರುಣಾನಿಧಿ ಅವರ ಕಾಲದಲ್ಲಿ ಐಯುಎಂಎಲ್‌ಗೆ 5 ವಿಧಾನಸಭಾ ಕ್ಷೇತ್ರಗಳನ್ನು ನೀಡಲಾಗುತ್ತಿತ್ತು. ಈಗಿನ ಡಿಎಂಕೆ ನಾಯಕತ್ವವೂ ಅದೇ ಪ್ರಮಾಣದಲ್ಲಿನಮಗೆಸ್ಥಾನಗಳನ್ನುನೀಡ ಬೇಕೆಂದು ಮನವಿ ಮಾಡಿದ್ದೇವೆಂದು ತಿಳಿಸಿದರು.

# ರಾಜ್ಯದಲ್ಲಿ ಈ ವರ್ಷ ವಾಡಿಕೆಗಿಂತ ಅಧಿಕ ಬಿಸಿಲು

• ಪ್ರಜೋದಯ ವರದಿ



**ಬೆಂಗಳೂರು:** ರಾಜ್ಯದಲ್ಲಿ ಈ ವರ್ಷ ಬೇಸಿಗೆ ಅವಧಿಯಲ್ಲಿ ವಾಡಿಕೆಗಿಂತ ಅಧಿಕ ತಾಪಮಾನ ವರದಿಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕಲಬುರಗಿ, ಹಾವೇರಿ, ಬಾಗಲಕೋಟೆ, ಶಿವಮೊಗ್ಗಾ, ಉತ್ತರ ಕನ್ನಡ ಸೇರಿ ಹಲವು ಜಿಲ್ಲೆಗಳಲ್ಲಿ ಗರಿಷ್ಠ ತಾಪಮಾನ;ಈಗಾಗಲೇ ವಾಡಿಕೆಗಿಂತ ಅಧಿಕವಾಗಿದೆ ಎಂದು ವರದಿಯಾಗುತ್ತಿದೆ. ಬಹುತೇಕ ಜಿಲ್ಲೆಗಳಲ್ಲಿ ಗರಿಷ್ಠ ಉಷ್ಣಾಂಶ 35 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿದ್ದರೆ, ಕಲಬುರಗಿಯಲ್ಲಿ 36 ಡಿಗ್ರಿ ಸೆಲ್ಸಿಯಸ್ ತಲುಪಿದೆ. ಕೆಲವೆಡೆ ವಾಡಿಕೆಗಿಂತ 3 ಡಿಗ್ರಿ ಸೆಲ್ಸಿಯಸ್‌ವರೆಗೂ ಹೆಚ್ಚು ವರದಿಯಾಗುತ್ತಿದೆ.

ಜಾಗತಿಕ ತಾಪಮಾನ ಏರಿಕೆ, ತೇವಾಂಶ ಕೊರತೆ, ಶುಭ್ರ ಆಕಾಶ, ಲಾ ನಿನಾ ಪರಿಣಾಮ (ಉಷ್ಣವಲಯದ ಫೆಸಿಫಿಕ್ ಸಾಗರದಲ್ಲಿ ಮೇಲ್ಮೈ ತಾಪಮಾನ ತಂಪಾಗಿರುವುದು) ಸೇರಿ ವಿವಿಧ ಕಾರಣಗಳಿಂದ ಏಪ್ರಿಲ್ ಮತ್ತು ಮೇಯಲ್ಲಿ;ಗರಿಷ್ಠ ತಾಪಮಾನವು ವಾಡಿಕೆಗಿಂತ 4-5 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗಬಹು ದೆಂದು ಹವಾಮಾನ ಇಲಾಖೆ ವಿಶ್ಲೇಷಿಸಿದೆ.

ಉತ್ತರ ಒಳನಾಡಿನ ಕಲಬುರಗಿ, ಯಾದಗಿರಿ, ಕೊಪ್ಪಳ, ರಾಯಚೂರು, ಬಾಗಲಕೋಟೆ, ಬಳ್ಳಾರಿ ಸೇರಿ ವಿವಿಧ ಜಿಲ್ಲೆಗಳಲ್ಲಿ ಏಪ್ರಿಲ್‌ಮೇ ತಿಂಗಳು ಗರಿಷ್ಠ ಉಷ್ಣಾಂಶ 42 ಡಿಗ್ರಿ ಸೆಲ್ಸಿಯಸ್‌ನಿಂದ 45 ಡಿಗ್ರಿ ಸೆಲ್ಸಿಯಸ್ ತಲುಪುವ ಸಾಧ್ಯತೆಯಿದೆ. ಬೆಂಗಳೂರಿನಲ್ಲಿಯೂ ಉಷ್ಣಾಂಶ ಹೆಚ್ಚಳವಾಗುವ ಸಂಭವವಿದ್ದು, 39 ಡಿಗ್ರಿ ಸೆಲ್ಸಿಯಸ್ ತಲುಪಬಹುದೆಂದು ಇಲಾಖೆಯ ಹವಾಮಾನ ತಜ್ಞ ಸಿ.ಎಸ್.ಪಾಟೀಲ ತಿಳಿಸಿದರು.

ಬೇಸಿಗೆಯಲ್ಲಿ ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ ಬಿಸಿಲಿನ ತೀವ್ರತೆ ಹೆಚ್ಚಿರುವ ಕಾರಣ, ನೀರನ್ನು ಆಗಾಗ ಕುಡಿಯಬೇಕು. ಸಡಿಲವಾದ ತೆಳ್ಳನೆ ಬಟ್ಟೆಯನ್ನು ಧರಿಸಬೇಕು. ಚಹಾಕಾಫಿ ಬದಲು, ತಂಪು ಪಾನೀಯ ಸೇವಿಸಬೇಕೆಂದು ಸಲಹೆ ನೀಡಿದರು.

**ಮನ್ ಕಿ ಬಾತ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿಯಿಂದ ರೈತರ ಪ್ರಶಂಸೆ**

# ಕರ್ನಾಟಕ ರೈತರ ಕೃಷಿ ಉತ್ಪನ್ನಗಳು ವಿದೇಶಗಳಿಗೆ ರವಾನೆ

• ಪ್ರಜೋದಯ ವರದಿ





**ನವದೆಹಲಿ:** ಕರ್ನಾಟಕದ ರೈತರು ತಮ್ಮ ಕೃಷಿ ಉತ್ಪನ್ನಗಳನ್ನು ವಿದೇಶಗಳಿಗೆ ರವಾನೆ ಮಾಡುವ ಮೂಲಕ ಗಮನಸೆಳೆಯುತ್ತಿದ್ದಾರೆಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಮನ್ ಕಿ ಬಾತ್‌ನಲ್ಲಿ ಹೇಳಿದ್ದಾರೆ.

ಕರ್ನಾಟಕದ ನಂಜನಗೂಡಿನ ಬಾಳೆ ಹಣ್ಣು, ಮೈಸೂರಿನ ವೀಳ್ಯೆದೆಲೆ ಹಾಗೂ ಇಂಡಿಯಲ್ಲಿ ಬೆಳೆಯುವ ನಿಂಬೆಹಣ್ಣುಗಳನ್ನು ಅಲ್ಲಿನ ರೈತರು ಮಾಲ್ದೀವ್ಸ್ ಸೇರಿ ಹಲವು ದೇಶಗಳಿಗೆ ರಫ್ತು ಮಾಡುತ್ತಿದ್ದಾರೆ. ಆ ಉತ್ಪನ್ನಗಳು ರುಚಿಯ ಜೊತೆ ಗುಣಮಟ್ಟವನ್ನು ಕೂಡ ಹೊಂದಿವೆ. ಅವುಗಳಿಗೆ ಜಿಐ ಟ್ಯಾಗ್ ಕೂಡ ಇದೆ ಎಂದು ತಿಳಿಸಿದ್ದಾರೆ.

ಇಂದಿನ ರೈತರು ಗುಣಮಟ್ಟದ ಕೃಷಿಯ ಜತೆ ಉತ್ಪನ್ನದ ಪ್ರಮಾಣವನ್ನು ಕೂಡ ಹೆಚ್ಚಿಸುವ ಕೆಲಸ ಮಾಡುತ್ತಿದ್ದಾರೆ. ನೆಲ, ಜಲವನ್ನು ಸರಿ ಯಾಗಿ ಉಪಯೋಗಿಸಿಕೊಳ್ಳುವ ಮೂಲಕ ಉತ್ತಮ ಆದಾಯವನ್ನು ಕೂಡ ಪಡೆಯುತ್ತಿದ್ದಾರೆಂದು ಹೇಳಿದ್ದಾರೆ.

ಒಡಿಶಾದ ಹಿರೋಡ್ ಪಟೇಲ್ ಎನ್ನುವ ಯುವ ಕೃಷಿಕನೊಬ್ಬ, ಹೊಸ ಮಾದರಿಯ ಕೃಷಿಯ ಮೂಲಕ ಗಮನ ಸೆಳೆಯುತ್ತಿದ್ದಾನೆ. ಕೃಷಿ ಹೊಂಡದಲ್ಲಿ ತರಕಾರಿ ಬೆಳೆದರೆ, ಅದರ ಸುತ್ತ ಬಾಳೆಹಣ್ಣು, ತೆಂಗನ್ನು ಬೆಳೆಯುತ್ತಿದ್ದಾನೆ. ಆ ಹೊಂಡದಲ್ಲೇ ಮೀನು ಸಾಕಾಣಿಕೆಯನ್ನು ಕೂಡ ಮಾಡುತ್ತಿದ್ದಾನೆ. ಅದನ್ನು ವೀಕ್ಷಿಸಲು ದೂರದೂರಿನಿಂದ ರೈತರು ಅವರ ತೋಟಕ್ಕೆ ಭೇಟಿ ನೀಡುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಕೇರಳದ ತ್ರಿಶೂರ್‌ನ ಹಳ್ಳಿಯೊಂದರಲ್ಲಿ 570 ವಿವಿಧ ತಳಿಯ ಭತ್ತವನ್ನು ಯಶಸ್ವಿಯಾಗಿ ಬೆಳೆಯುವ ಮೂಲಕ ಅಲ್ಲಿನ ರೈತರು ಗಮನಸೆಳೆ ದಿದ್ದಾರೆ. ಕೃಷಿ ಉತ್ಪನ್ನಗಳ ರಫ್ತು ಹೆಚ್ಚಾಗುತ್ತಿರುವುದು ದೇಶದ ರೈತರ ಪರಿಶ್ರಮವನ್ನು ತೋರಿಸುತ್ತದೆ. ಅವರು ಮಣ್ಣಿನ ನಿಜವಾದ ಆರಾಧಕರು. ಅವರು ಮಣ್ಣನ್ನು ಚಿನ್ನವಾಗಿಸುವ ಸಾಮರ್ಥ್ಯ ಹೊಂದಿದ್ದಾರೆಂದು ಹೇಳಿದ್ದಾರೆ.

ಭಾರತವು ಪ್ರತಿವರ್ಷ 150 ಮಿಲಿಯನ್ ಟನ್ ಭತ್ತವನ್ನು ಉತ್ಪಾದಿಸುವ ಮೂಲಕ ಜಗತ್ತಿನ ಅತಿದೊಡ್ಡ ಭತ್ತ ಬೆಳೆಯುವ ದೇಶವಾ ಗಿದೆ. ಅದರಿಂದ ದೇಶದ ಅವ ಶ್ಯಕತೆಯನ್ನು ಮೀರಿ ನಾವು ಜಾಗತಿಕವಾಗಿ ರಫ್ತು ಮಾಡಲು ಸಾಧ್ಯವಾಗಿದೆಂದು ತಿಳಿಸಿದ್ದಾರೆ.

ಹಲವು ರೈತರು ಸಂಪ್ರದಾ ಯಿಕ ಕೃಷಿಯ ಜೊತೆ ತಂತ್ರ ಜ್ಞಾನವನ್ನು ಬಳಸಿಕೊಳ್ಳುವ ಮೂಲಕ ಕೃಷಿ ಉತ್ಪನ್ನಗಳ ಮಾರು ಕಟ್ಟೆಯನ್ನು ವಿಸ್ತರಿಸುತ್ತಿದ್ದಾರೆಂದು ಹೇಳಿದ್ದಾರೆ.

### ನೇಪಾಳ, ದುಬೈ, ಅಬುದಾಬಿ, ಕುವೈತ್, ಶ್ರೀಲಂಕಾಕ್ಕೆ ನಿಂಬೆ ರಫ್ತು

ವಿಜಯಪುರ: ಭಾರತ ಸರ್ಕಾರದಿಂದ ಭೌಗೋಳಿಕ ಮಾನ್ಯತೆ (ಜಿಯೋಗ್ರಫಿಕಲ್ ಟ್ಯಾಗ್) ಲಭಿಸಿದ ಬಳಿಕ ಜಿಲ್ಲೆಯ ಸುಪ್ರಸಿದ್ಧ ಇಂಡಿಕಾಗ್ಝಿ ಲಿಂಬೆ ವಿದೇಶಗಳಿಗೆ ರಫ್ತಾಗುತ್ತಿದ್ದು, ರಾಜ್ಯದಿಂದ ನೆರೆಯ ಬಾಂಗ್ಲಾದೇಶ, ನೇಪಾಳ, ದುಬೈ, ಅಬುದಾಬಿ, ಕುವೈತ್, ಶ್ರೀಲಂಕಾ, ಪಾಕಿಸ್ತಾನ ಸೇರಿ ಸುಮಾರು 25 ದೇಶಗಳಿಗೆ ಉತ್ಕೃಷ್ಟ ಗುಣಮಟ್ಟದ ಲಿಂಬೆಯನ್ನು ರಫ್ತು ಮಾಡಲಾಗುತ್ತಿದೆ. ಇಂಡಿ ತಾಲ್ಲೂಕಿನ ಕೊಳೂರಗಿ ಗ್ರಾಮದ ಯುವ ರೈತ ಚಂದ್ರಕಾಂತ ಮೇಡೆಗಾರ ಅವರು ಅಫೇಡಾ ಸಂಸ್ಥೆಯ ಮಾರ್ಗದರ್ಶನದಲ್ಲಿ ಇಂಡಿ ಲಿಂಬೆಯನ್ನು ಕಳೆದ ವರ್ಷ ಯುಎಇ ಸೇರಿ ಐರೋಪ್ಯ ರಾಷ್ಟ್ರಗಳಿಗೆ ರಫ್ತು ಮಾಡಿದ್ದಾರೆ.

ಬೆಂಗಳೂರು, ಮುಂಬೈ, ಹೈದರಾಬಾದ್, ನವದೆಹಲಿ ಸೇರಿ ಮತ್ತಿತರ ಪ್ರಮುಖ ನಗರಗಳಿಗೆ ಇಂಡಿ ನಿಂಬೆ ಹಣ್ಣು ಹೋಗುತ್ತಿತ್ತು. ಇದೀಗ ಐರೋಪ್ಯ ರಾಷ್ಟ್ರಗಳಿಗೂ ರಫ್ತಾಗುತ್ತಿರುವುದರಿಂದ ಲಿಂಬೆ ಬೆಳೆಗೆ ಮಹತ್ವ ಬಂದಿದೆ. ಐರೋಪ್ಯ ರಾಷ್ಟ್ರಗಳಿಗೆ ರಫ್ತಾಗುತ್ತಿರುವುದರಿಂದ ಬೆಳೆಗಾರರಿಗೆ ಉತ್ತಮ ಬೆಲೆಯೂ ದೊರೆತಿದೆ. ಈ ಹಿಂದೆ ಪ್ರತಿವರ್ಷ 350 ರಿಂದ 500 ಕೋಟಿ ವರೆಗೆ ವಹಿವಾಟು ನಡೆಯುತ್ತಿದ್ದ ಇಂಡಿ ನಿಂಬೆ ಇಂದು 600 ರಿಂದ 800 ಕೋಟಿ ವಹಿವಾಟು ನಡೆಯುತ್ತಿದೆ ಎಂದು ನಿಂಬೆ ಅಭಿವೃದ್ಧಿ ಮಂಡಳಿ ತಿಳಿಸಿದೆ. ನಿಂಬೆಹಣ್ಣಿನ ಜೊತೆಗೆ ಇದೀಗ ಇಂಡಿ ತಾಲ್ಲೂಕಿನಲ್ಲಿ ರೈತರು ಬೆಳೆಯುತ್ತಿರುವ ನಿಂಬೆ ಸಸಿಗಳಿಗೂ ಕೂಡಾ ಎಲ್ಲಿಲ್ಲದ ಬೇಡಿಕೆ ಬಂದಿದೆ. ಹೊರ ರಾಜ್ಯಗಳ ರೈತರು ಕೂಡ ಇಂಡಿ ನಿಂಬೆ ಸಸಿಗಳನ್ನು ಕೊಳ್ಳತೊಡಗಿದ್ದಾರೆ. ವಿಜಯಪುರ ಜಿಲ್ಲೆ ರಾಜ್ಯದ ಲಿಂಬೆ ತೋಟ ಎಂದೇ ಪ್ರಸಿದ್ಧವಾಗಿದೆ. ಜಿಲ್ಲೆಯು ರಾಜ್ಯದ ವಿಸ್ತೀರ್ಣದಲ್ಲಿ ಶೇ.58ರಷ್ಟು (12,220 ಹೆಕ್ಟೇರ್) ಲಿಂಬೆ ಬೆಳೆ ಪ್ರದೇಶ ಹೊಂದಿದೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019